# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಶುಕ್ರವಾರ, ಜುಲೈ 12, 2024

ಸಂಪುಟ : 51 ಸಂಚಿಕೆ : 59 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಆರ್ಕಿಟೆಕ್ಚರ್ ಅರ್ಹತಾ ಅಂಕ ಶೇ.45ಕ್ಕೆ ಇಳಿಕೆ

ಬೆಂಗಳೂರು, ಜು. 11 - ಆರ್ಕಿಟೆಕ್ಚರ್ ಕೋರ್ಸ್‌ಗೆ ದ್ವಿತೀಯ ಪಿಯುಸಿ ಅರ್ಹತಾ ಅಂಕಗಳನ್ನು ಶೇ.50ರಿಂದ ಶೇ.45ಕ್ಕೆ ಇಳಿಕೆ ಮಾಡಿರುವ ಹಿನ್ನೆಲೆಯಲ್ಲಿ ಕೋರ್ಸ್‌ಗೆ ಸೇರಬಯಸುವ ಅಭ್ಯರ್ಥಿಗಳು ಈ ತಿಂಗಳ 13ರೊಳಗೆ ಯುಜಿಸಿಇಟಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅವಕಾಶ ಕಲ್ಪಿಸಿದೆ.

ಕೌನ್ಸಿಲ್ ಆಫ್ ಆರ್ಕಿಟೆಕ್ಚರ್ ಕೋರ್ಸ್‌ಗೆ ಅರ್ಹತಾ ಅಂಕಗಳಲ್ಲಿ ಕಡಿತ ಮಾಡಿದ್ದು, ದ್ವಿತೀಯ ಪಿಯುಸಿಯಲ್ಲಿ ಶೇ.45ರಷ್ಟು ಅಂಕ ಪಡೆದವರು ಅರ್ಜಿ ಸಲ್ಲಿಸಲು (4ನೇ ಪುಟಕ್ಕೆ)

## ನಟಿ, ನಿರೂಪಕಿ ಅಪರ್ಣಾ ನಿಧನ



ಬೆಂಗಳೂರು, ಜು. 11 - ಕನ್ನಡ ಚಿತ್ರರಂಗದ ಖ್ಯಾತ ನಟಿ, ನಿರೂಪಕಿ ಅಪರ್ಣಾ ವಸ್ತಾರೆ ನಿಧನರಾಗಿದ್ದಾರೆ. ದೀರ್ಘಕಾಲದ ಶ್ವಾಸಕೋಶದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅಪರ್ಣಾ, ಬನಶಂಕರಿಯ ಸ್ವಗೃಹದಲ್ಲಿ ಸಾವನ್ನಪ್ಪಿದ್ದಾರೆ.

ಮಸಣದ ಹೂವು, ಇನ್ಸ್‌ಪೆಕ್ಟರ್ ವಿಕ್ರಮ್ ಸೇರಿದಂತೆ ಹಲವು (4ನೇ ಪುಟಕ್ಕೆ)

## ಚಿರಸ್ಮರಣೆ





ಏಳನೇ ವರ್ಷದ ಪುಣ್ಯಸ್ಮರಣೆ

ಎರಡನೇ ವರ್ಷದ ಪುಣ್ಯಸ್ಮರಣೆ

**ದಿ|| ಶ್ರೀ ಐ.ಪಿ. ಸೋಮನಾಥಾರಾಧ್ಯ**

ಲಿಂಗೈಕ್ಯ : 12.07.2017

ಇವರ ಧರ್ಮಪತ್ನಿ

**ದಿ|| ಶ್ರೀಮತಿ ಐ.ಎಸ್. ಸುವರ್ಣಮ್ಮ**


ಲಿಂಗೈಕ್ಯ : 09.11.2022

ನೀವು ನಮ್ಮನ್ನಗಲಿ ವರ್ಷಗಳೇ ಆದರೂ ನೀವು ತೋರಿದ ಸನ್ಮಾರ್ಗದಲ್ಲಿ ನಡೆಯುತ್ತಾ... ಸದಾ ನಿಮ್ಮ ಸ್ಮರಣೆಯಲ್ಲಿರುವ...

- : ಇಂತಿ ದುಃಖತಪ್ತರು : -

ಮಕ್ಕಳು, ಮೊಮ್ಮಕ್ಕಳು ಮತ್ತು ಅಳಿಯಂದಿರು, ಸೊಸೆಯಂದಿರು ಹಾಗೂ ಆರಾಧ್ಯ ಕುಟುಂಬ ವರ್ಗದವರು, ದಾವಣಗೆರೆ.


manipalhospitals
LIFE'S ON



ಮಣಿಪಾಲ್ ಆಸ್ಪತ್ರೆ ಯಶವಂತಪುರ, ಬೆಂಗಳೂರಿನ ಪ್ರಖ್ಯಾತ ವಾಸ್ಕ್ಯುಲರ್ ಶಸ್ತ್ರಚಿಕಿತ್ಸಾ ತಜ್ಞರು ಪ್ರತಿ ತಿಂಗಳ ಮೂರನೇ ಭಾನುವಾರದಂದು ಆರೈಕೆ ಆಸ್ಪತ್ರೆ, ದಾವಣಗೆರೆಯಲ್ಲಿ ಸಮಾಲೋಚನೆಗೆ ಲಭ್ಯವಿರುತ್ತಾರೆ

ಭಾನುವಾರ, 14ನೇ ಜುಲೈ, 2024
ಬೆಳಗ್ಗೆ 10:00 ಘಂಟೆಯಿಂದ ಮಧ್ಯಾಹ್ನ 1:00 ಘಂಟೆಯವರೆಗೆ

Aaraike Hospitals
ಆರೈಕೆ ಆಸ್ಪತ್ರೆ
ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ

ಡಾ. ರಾಜೇಂದ್ರ ಪ್ರಸಾದ್ ಬಿ
ಎಂಬಿಬಿಎಸ್, ಎಂ.ಎಸ್, ಡಿಎನ್‌ಬಿ (ರಕ್ತನಾಳ ಶಸ್ತ್ರಚಿಕಿತ್ಸೆ), ಎಫ್‌ವಿಇಎಸ್ (ಆಸ್ಟ್ರಿಯಾ)
ಸಲಹೆಗಾರರು - ವಾಸ್ಕ್ಯುಲರ್ ಮತ್ತು ಎಂಡೋವಾಸ್ಕ್ಯುಲರ್ ಸರ್ಜರಿ
ಮಣಿಪಾಲ್ ಆಸ್ಪತ್ರೆ ಯಶವಂತಪುರ, ಬೆಂಗಳೂರು.

ಈ ಸಮಸ್ಯೆಗಳ ಕುರಿತು ತಜ್ಞರೊಂದಿಗೆ ಸಲಹೆ ಪಡೆಯಿರಿ
ಉಬ್ಬಿರುವ ರಕ್ತನಾಳಗಳು । ಕೈ ಮತ್ತು ಕಾಲುಗಳ ಊತ ಮತ್ತು ನೋವು । ಮಧುಮೇಹ ಕಾಲು । ಡಯಾಲಿಸಿಸ್ । ವಾಸಿಯಾಗದ ಗಾಯಗಳು । ಕಾಲು ಬೆರಳುಗಳ ಬಣ್ಣ ಬದಲಾವಣೆ । ಗ್ಯಾಂಗ್ರೀನ್ ಮತ್ತು ಇನ್ನೂ ಅನೇಕ ಸಮಸ್ಯೆಗಳು

Manipal Hospital Yeshwanthpur
Brigade Gateway, #26/4, 80 Feet, Dr. Rajkumar Road, Malleshwaram West, Bengaluru 560 055, Karnataka.
P 080 6165 6262


ನಿಮ್ಮ ಅಪಾಯಿಂಟ್ಮೆಂಟ್‌ಗಾಗಿ ಕರೆ ಮಾಡಿ!
Harishkumar
+91 80505 60580


## ಜನ್ಮದಿನದ ಶುಭಾಶಯಗಳು

ಛಲ, ಸಂಕಲ್ಪ ಶಕ್ತಿ ಮತ್ತು ಹೋರಾಟದ ಮೂಲಕವೇ ಗುರುತಿಸಿಕೊಂಡಿರುವ ಅಭಿವೃದ್ಧಿಯ ಹರಿಕಾರರು, ಮಾಜಿ ಕೇಂದ್ರ ಸಚಿವರು, ದಾವಣಗೆರೆ ಜಿಲ್ಲೆಯ ಮಾಜಿ ಸಂಸದರು, ಸೋಲಿಲ್ಲದ ಸರದಾರರು, ಸತತ ನಾಲ್ಕು ಬಾರಿ ಸಂಸದರಾದಂತಹ

**ಸನ್ಮಾನ್ಯ ಡಾ. ಜಿ.ಎಂ.ಸಿದ್ದೇಶ್ವರ**

ಇವರಿಗೆ 72ನೇ ಜನ್ಮದಿನದ ಹೃತ್ಪೂರ್ವಕ ಶುಭಾಷಯಗಳು



ಶುಭ ಕೋರುವವರು

ಆಡಳಿತ ಮಂಡಳಿ, ಅಧ್ಯಾಪಕರು ಮತ್ತು ಸಿಬ್ಬಂದಿ ವರ್ಗದವರು

**ಜಿ.ಎಂ. ವಿಶ್ವವಿದ್ಯಾಲಯ**

ಜಿಎಂ. ಸಮೂಹ ಸಂಸ್ಥೆಗಳ ಆಡಳಿತ ಮಂಡಳಿ ನಿರ್ದೇಶಕರು, ಸಿಬ್ಬಂದಿ ವರ್ಗದವರು ಮತ್ತು ಅಭಿಮಾನಿಗಳು






ಮಲಬಾರ್
ಗೋಲ್ಡ್ & ಡೈಮಂಡ್ಸ್

ಆಷಾಢ ಶುಭ ಲಾಭ


ಪಡೆಯಿರಿ 25%* ವರೆಗೆ ಕಡಿತ
ಮೇಕಿಂಗ್ ಚಾರ್ಜ್ ಮೇಲೆ
ಚಿನ್ನಾಭರಣಗಳ ಖರೀದಿಯಲ್ಲಿ


ಫ್ಲಾಟ್ 25%* ಕಡಿತ
ಮೇಕಿಂಗ್ ಚಾರ್ಜ್ ಮೇಲೆ
ಸ್ಟಡ್ಡ್ ಆಭರಣಗಳ ಖರೀದಿಯಲ್ಲಿ

ಪಡೆಯಿರಿ 25%* ವರೆಗೆ ಕಡಿತ
ವಜ್ರದ ಮೌಲ್ಯದ ಮೇಲೆ

ಈ ಕೊಡುಗೆ ಜುಲೈ 6 – ಆಗಸ್ಟ್ 4 ರವರೆಗೆ ಮಾನ್ಯವಾಗಿದೆ*

*ಷರತ್ತುಗಳು ಅನ್ವಯ







ದಾವಣಗೆರೆ, ಮಂಡಿಪೇಟೆ । 08192 232916, 7994435487

INDIA | AUSTRALIA | CANADA | UK | USA | SINGAPORE | MALAYSIA | UAE | QATAR | KSA | OMAN | KUWAIT | BAHRAIN

Buy online at: malabargoldanddiamonds.com
Over 350 Stores Across 13 Countries

# ಜಿಲ್ಲಾಸ್ಪತ್ರೆಗೆ ಹುದ್ದೆಗಳ ಮಂಜೂರು ಮಾಡಲು ಕ್ರಮ : ಸಚಿವ ದಿನೇಶ್ ಗುಂಡೂರಾವ್

ದಾವಣಗೆರೆ, ಜು. 11 - ಜಿಲ್ಲಾ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಗೆ 400 ಹಾಸಿಗೆ ಸಾಮರ್ಥ್ಯಕ್ಕೆ ಅನುಗುಣವಾಗಿ ಹುದ್ದೆ ಮಂಜೂರು ಮಾಡಲಾಗಿತ್ತು. ಆದರೆ, ಈ ಆಸ್ಪತ್ರೆ ಈಗ 930 ಹಾಸಿಗೆಗಳನ್ನು ಹೊಂದಿದ್ದು, ಇದಕ್ಕೆ ಅನುಗುಣವಾಗಿ ಹುದ್ದೆಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ಇಲ್ಲಿನ ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಗುರುವಾರ ಆರೋಗ್ಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿ, ನಂತರ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು.

ಆಸ್ಪತ್ರೆಯ ಕಟ್ಟಡ ತುಂಬ ಹಳೆಯದಾಗಿದ್ದು, ಇದನ್ನು ದುರಸ್ತಿಗೊಳಿಸಿದರೆ ಪ್ರಯೋಜನವಾಗಲ್ಲ. ಇಡೀ ಕಟ್ಟಡವನ್ನು ಹೊಸದಾಗಿ ನಿರ್ಮಿಸಬೇಕಾದರೆ ಕನಿಷ್ಠ 100 ಕೋಟಿ ರೂ. ಬೇಕು. ಅಷ್ಟು ಅನುದಾನ ಒದಗಿಸಲು ಈಗ ಸಾಧ್ಯವಿಲ್ಲ. ಹಾಗಾಗಿ, ಪ್ರಸ್ತುತ ದಕ್ಷಿಣ ಬ್ಲಾಕ್ ತೆರವು ಮಾಡಿ ಹೊಸ ಕಟ್ಟಡ ನಿರ್ಮಾಣಕ್ಕೆ ರೂ. 20 ಕೋಟಿ ಬಿಡುಗಡೆ ಮಾಡಲಾಗುತ್ತದೆ ಎಂದರು.

ಇದಕ್ಕೂ ಮುನ್ನ ನಡೆದ ಸಭೆಯಲ್ಲಿ ಮಾತನಾಡಿದ ಸಚಿವರು, ಇಲ್ಲಿನ ಆಸ್ಪತ್ರೆಗೆ ಇತರೆ ಜಿಲ್ಲೆಗಳಿಂದಲೂ ರೆಫರಲ್ ಆಗಿ ಹೆರಿಗೆಗಾಗಿ ಬರುತ್ತಿದ್ದು ತಿಂಗಳಿಗೆ 600 ರಿಂದ 700 ರಷ್ಟು ಹೆರಿಗೆಯಾಗುತ್ತಿದೆ ಮತ್ತು ನವಜಾತ ಶಿಶುಗಳು ಹಾಗೂ ಮಕ್ಕಳ ಚಿಕಿತ್ಸೆಗಾಗಿ ಹೆಚ್ಚು ಜನರು ಆಗಮಿಸುತ್ತಿರುವುದರಿಂದ ಈಗಿರುವ ಸ್ಥಳಾವಕಾಶ ಸಾಕಾಗುವುದಿಲ್ಲ. ಈಗಾಗಲೇ ತಾಯಿ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣವಾಗಿದ್ದು, ಒಂದು ವಾರದಲ್ಲಿ ಅಲ್ಲಿಗೆ ಸ್ಥಳಾಂತರಿಸಲು ತಿಳಿಸಿ, ವಾರದಲ್ಲಿ ಟ್ರಾಮಾ ಕೇರ್ ಸೆಂಟರ್ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಉದ್ಘಾಟನೆ ಮಾಡಲಾಗುತ್ತದೆ ಎಂದರು.



ಚಾಮರಾಜ ಸರ್ಕಲ್ ಬಳಿಯ ಹಳೆಯ ಹೆರಿಗೆ ಆಸ್ಪತ್ರೆಗೆ ಸಚಿವ ದಿನೇಶ್ ಗೂಂಡೂರಾವ್ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಆಸ್ಪತ್ರೆಯ ಅಭಿವೃದ್ಧಿಗೆ ಅನುದಾನ ನೀಡುವಂತೆ ಸಚಿವ ಶಾಮನೂರು ಮಲ್ಲಿಕಾರ್ಜುನ್ ಮನವಿ ಮಾಡಿದರು.

ಇಲ್ಲಿಗೆ ಎಂಆರ್‌ಐ ಸ್ಕ್ಯಾನ್ ಬೇಕೆಂದು ಬೇಡಿಕೆ ಇದ್ದು ಇನ್ನೆರಡು ತಿಂಗಳಲ್ಲಿ ನೀಡಲಾಗುತ್ತದೆ. ಶವಾಗಾರ ಸೇರಿದಂತೆ ಒಳಚರಂಡಿ, ಓವರ್‌ಹೆಡ್ ಟ್ಯಾಂಕ್, ಸೇರಿದಂತೆ ಮಕ್ಕಳ ನಿಗಾ ಘಟಕಕ್ಕೆ ವೆಂಟಿಲೇಟರ್, ಆರ್ಥೋ ವಿಭಾಗಕ್ಕೆ ಮಾದರಿ ಓಟಿ ಬೇಕೆಂದು ಸರ್ಜನ್ ಮನವಿ ಮಾಡಿದರು. ಆಸ್ಪತ್ರೆಯ ಬಳಕೆ ಅನುದಾನ ಮತ್ತು ಎಬಿಆರ್‌ಕೆ ಯಡಿ ಬರುವ ಅನುದಾನವನ್ನು ಆರೋಗ್ಯ ರಕ್ಷಾ ಸಮಿತಿಯಲ್ಲಿ ಅನುಮೋದನೆ ಪಡೆದು ಜಿಲ್ಲಾಧಿಕಾರಿಯವರಿಂದ ಮಂಜೂರಾತಿ ಪಡೆದು ಆಸ್ಪತ್ರೆಗೆ ಅಗತ್ಯವಿರುವ ಸೌಲಭ್ಯ ಕಲ್ಪಿಸಲು ಸರ್ಜನ್ ತಿಳಿಸಿ ಯೂಸರ್ ಫಂಡ್ ಮತ್ತು ಎಬಿಆರ್‌ಕೆಯಡಿ 5 ಕೋಟಿಯಷ್ಟು ಅನುದಾನವಿದ್ದು ಇದನ್ನು ವೆಚ್ಚ ಮಾಡಿ ಜನರಿಗೆ ಆರೋಗ್ಯ ಸೌಲಭ್ಯ ಕಲ್ಪಿಸಲು ತಿಳಿಸಿದರು.

ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಎಲ್ಲಾ ವಿಧವಾದ ತಜ್ಞ ವೈದ್ಯರ ಜೊತೆಗೆ ಮೆಡಿಕಲ್ ಕಾಲೇಜ್ ತಜ್ಞ ವೈದ್ಯರು ಲಭ್ಯವಾಗುವುದರಿಂದ ಇಲ್ಲಿ ವಿನೂತನವಾದ ಶಸ್ತ್ರ ಚಿಕಿತ್ಸೆಗಳನ್ನು ಕೈಗೊಳ್ಳುವ ಅವಕಾಶ ಇದೆ. ಆರ್ಥೋ ವಿಭಾಗದಲ್ಲಿ ಎಲ್ಲಾ ಬಗೆಯ ಶಸ್ತ್ರ ಚಿಕಿತ್ಸೆ ಮಾಡಬಹುದು ಮತ್ತು ನೇತ್ರ ಚಿಕಿತ್ಸಾ ವಿಭಾಗದಲ್ಲಿಯು ರೆಟಿನಾ ಶಸ್ತ್ರ ಚಿಕಿತ್ಸೆಯನ್ನು ಇಲ್ಲಿ ಕೈಗೊಳ್ಳುವಂತಾಗಬೇಕು. ಇದರಿಂದ ಎಬಿಆರ್‌ಕೆಯಡಿ ಹೆಚ್ಚು ಅನುದಾನ ಲಭ್ಯವಾಗುವುದರಿಂದ ಆಸ್ಪತ್ರೆಯ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗಲಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಮಾತನಾಡಿ ಆಸ್ಪತ್ರೆಗೆ ಬೇಕಾದ ಓವರ್‌ಹೆಡ್ ಟ್ಯಾಂಕ್ ಮತ್ತು ಆಸ್ಪತ್ರೆಯೊಳಗೆ ಪ್ರಮುಖ ರಸ್ತೆಗಳನ್ನು ಪಾಲಿಕೆ ಅಥವಾ ಇತರೆ ಸರ್ಕಾರದ ಯೋಜನೆಯಲ್ಲಿ ಕೈಗೊಳ್ಳಲಾಗುತ್ತದೆ.

ಆಸ್ಪತ್ರೆಯ ಮೂಲಭೂತ ಸೌಕರ್ಯಕ್ಕಾಗಿ ಈಗಿರುವ 7 ಕೋಟಿಯನ್ನು ಇತರೆ ಸೌಲಭ್ಯಗಳಿಗಾಗಿ ಬಳಕೆ ಮಾಡಿಕೊಳ್ಳಲಾಗುತ್ತದೆ. ಚಿಗಟೇರಿ ಆಸ್ಪತ್ರೆ ಎಲ್ಲಾ ಮೂಲಭೂತ ಸೌಕರ್ಯ ಕಲ್ಪಿಸಲು ತಕ್ಷಣದ ಕ್ರಮವಾಗಿ ಅಂದಾಜು 50 ಕೋಟಿ ಅಗತ್ಯವಾಗಿದ್ದು ಈ ಅನುದಾನವನ್ನು ಸರ್ಕಾರದಿಂದ ತಂದು ದಾವಣಗೆರೆ ಜನರಿಗೆ ಆರೋಗ್ಯ ಸೌಕರ್ಯ ಕಲ್ಪಿಸಲಾಗುತ್ತದೆ ಎಂದರು.

ಇನ್ನೊಂದು ವಾರದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡ ಉದ್ಘಾಟನೆ ಮಾಡುವ ಮೂಲಕ ಜನರಿಗೆ ಇನ್ನಷ್ಟು ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ ಎಂದರು.

ಸಭೆಯಲ್ಲಿ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಶಾಸಕರುಗಳಾದ ಕೆ.ಎಸ್.ಬಸವಂತಪ್ಪ, ದೇವೇಂದ್ರಪ್ಪ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತ ಡಾ.ರಂದೀಪ್, ಎನ್‌ಹೆಚ್‌ಎಂ ಯೋಜನಾ ನಿರ್ದೇಶಕ ಡಾ.ನವೀನ್ ಭಟ್ ಪೈ, ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಷಣ್ಮುಖಪ್ಪ, ಜಿಲ್ಲಾ ಸರ್ಜನ್ ಡಾ. ನಾಗೇಂದ್ರಪ್ಪ ಹಾಗೂ ಚಿಗಟೇರಿ ಆಸ್ಪತ್ರೆ ವೈದ್ಯರು, ಅಧಿಕಾರಿಗಳು ಉಪಸ್ಥಿತರಿದ್ದರು.

# 'ನನ್ನ ತಂದೆಯೇ ನನಗೆ ರಾಜಕೀಯ ಗುರು'

## ಸಮಾಜವಾದಿ ಎಂ.ಪಿ ಪ್ರಕಾಶ್ 84ನೇ ಜನ್ಮ ದಿನ ಕಾರ್ಯಕ್ರಮದಲಿ ಶಾಸಕಿ ಲತಾ



ಹರಪನಹಳ್ಳಿ, ಜು. 11 - 'ರಾಜಕಾರಣದಲ್ಲಿ ಮಾದರಿ ವ್ಯಕ್ತಿತ್ವ ಹೊಂದಿದ್ದ ನನ್ನ ತಂದೆಯೇ ನನಗೆ ರಾಜಕೀಯ ಗುರು' ಎಂದು ಶಾಸಕರಾದ ಶ್ರೀಮತಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ಕಾಶಿ ಸಂಗಮೇಶ್ವರ ಬಡಾವಣೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಎಂ.ಪಿ. ರವೀಂದ್ರ ಪ್ರತಿಷ್ಠಾನದ ವತಿಯಿಂದ ಇಂದು ಆಯೋಜಿಸಿದ್ದ ಮಾಜಿ ಉಪಮುಖ್ಯಮಂತ್ರಿ ಎಂ.ಪಿ.ಪ್ರಕಾಶ್ 84ನೇ ಜನ್ಮದಿನೋತ್ಸವದಲ್ಲಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ರಾಜಕಾರಣದಲ್ಲಿನ ವಿದ್ಯಮಾನಗಳನ್ನು ಗಮನಿಸು ತ್ತಿದ್ದಲ್ಲಿ, ರಾಜಕೀಯ ಮತ್ತು ರಾಜಕಾರಣಿಗಳು ಎಂದರೆ ಒಂದು ರೀತಿಯ ಅಸಹ್ಯ ಮತ್ತು ವಾಕರಿಕೆ ಬರುವಂತಿದೆ ಎಂದರೂ ತಪ್ಪಾಗದು. ಅಂತಹ ಭ್ರಷ್ಟ ರಾಜಕಾರಣದ ಮಧ್ಯದಲ್ಲಿಯೂ ಅಲ್ಲೊಂದು, ಇಲ್ಲೊಂದು ಸರಳ ಸಜ್ಜನ ರಾಜಕಾರಣಿಗಳು ಎಲೆಮರೆಯ ಕಾಯಿಯಂತೆ ಮಿಂಚಿ ಕಣ್ಮರೆಯಾಗಿ ಹೋಗಿದ್ದಾರೆ ಎಂದು ಅವರು ಹೇಳಿದರು.

ಸಾಹಿತಿ, ರಂಗಕರ್ಮಿ ಮತ್ತು ಸಮಾಜವಾದಿ ರಾಜಕಾರಣಿಯಾಗಿ ರಾಜ್ಯದ ಮಂತ್ರಿ, ಉಪಮುಖ್ಯಮಂತ್ರಿಗಳೂ ಆಗಿದ್ದ ಎಂ.ಪಿ. ಪ್ರಕಾಶ್ ಅವರಿಂದ ಸರ್ವರಿಗೂ ಸಮಪಾಲು, ಸಮಬಾಳು ಕಲ್ಪಿಸುವ ಗುಣ, ಸರಳ ವ್ಯಕ್ತಿತ್ವ, ಪ್ರಮಾಣಿಕತೆ ಕಲಿತಿರುವೆ. ಅವರಂತೆ ಮಾತನಾಡಲು ಬರಲ್ಲ, ಆದರೆ ಅವರ ತತ್ವಾದರ್ಶಗಳನ್ನು ಪಾಲಿಸುತ್ತಿರುವೆ ಎಂದು ಲತಾ ತಿಳಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ ಮಾತನಾಡಿ, ಎಂ.ಪಿ ಪ್ರಕಾಶ್ ಅವರು ಒಬ್ಬ ಸರಳ ಸಜ್ಜನ ರಾಜಕಾರಣಿಯಾಗಿದ್ದರು. ಅವರು ಮೂಲತಃ ವಕೀಲರಾಗಿ ಸೇವೆ ಸಲ್ಲಿಸಿ ನಂತರ 1973ರಲ್ಲಿ ಪದವೀಧರ ಕ್ಷೇತ್ರದಿಂದ ಎಂಎಲ್‌ಸಿ ಸ್ಥಾನಕ್ಕೆ ಸ್ಪರ್ಧಿಸಿ ಪರಾಜಯಗೊಳ್ಳುವ ಮೂಲಕವಾಗಿ ಅವರ ರಾಜಕೀಯ ಜೀವನ ಪ್ರಾರಂಭವಾಯಿತು. ನಂತರದಲ್ಲಿ 1979ರಲ್ಲಿ ಹಡಗಲಿ ವಿಧಾನ ಸಭಾ ಕ್ಷೇತ್ರದಿಂದ ಕೋಗಳಿ ಕರಿಬಸವನ ಗೌಡರ ವಿರುದ್ದವಾಗಿ ಸ್ಪರ್ಧಿಸಿ ಪುನಃ ಪರಾಭವಗೊಂಡರು. ಆದರೂ ಛಲ ಬಿಡದ ತ್ರಿವಿಕ್ರಮನಂತೆ ಮುಂದೆ 1983ರಲ್ಲಿ ಜನತಾ ಪಕ್ಷದಿಂದ ಸ್ಪರ್ಧಿಸಿ ಜಯ ಸಾಧಿಸಿದರು.

ಅಂದಿನಿಂದ ರಾಜಕೀಯ ಕ್ಷೇತ್ರದಲ್ಲಿ ಒಮ್ಮೆ ಗೆಲುವು ಸಾಧಿಸುತ್ತಾ, ಮತ್ತೊಮ್ಮೆ ಸೋಲನ್ನು ಅನುಭವಿಸುತ್ತಾ ಸೋಲು-ಗೆಲುವನ್ನು ಸಮನಾಗಿ ಹಂಚಿಕೊಂಡಿದ್ದಾರೆ. ಸೋತಾಗ ಎದೆಗುಂದದೆ, ಗೆದ್ದಾಗ ಬೀಗದೆ ಜನರ ಸೇವೆಯನ್ನು ಮಾಡುತ್ತಾ ಉನ್ನತ ಸ್ಥಾನ ಮಾನಕ್ಕೇರಿದವರು.

ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾಗಿ, ಉಪ ಮುಖ್ಯಮಂತ್ರಿಯಾಗಿ ನಾಡಿನ ಪ್ರಗತಿಗಾಗಿ ಶ್ರಮಿಸಿದ್ದಾರೆ. ಅಂತಹ ಸಜ್ಜನ ರಾಜಕಾರಣಿಯಿಂದ ನಮ್ಮಂತವರು ಕಲಿಯುವುದು ಬಹಳ ಇದೆ ಎಂದರು.

ಯುವ ಕಾಂಗ್ರೆಸ್ ಅಧ್ಯಕ್ಷ ಮತ್ತೂರು ಬಸವರಾಜ. ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಕಂಚಿಕೇರಿ ಜಯಲಕ್ಷ್ಮಿ, ಪುರಸಭೆ ಸದಸ್ಯರಾದ ಟಿ.ವೆಂಕಟೇಶ. ಲಾಟಿ ದಾದಾಪೀರ್, ಹಲವಾಗಲು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಎನ್.ಟಿ.ರತ್ನಮ್ಮ ಸೋಮಪ್ಪ, ಮುಖಂಡರಾದ ಆಲದಹಳ್ಳಿ ಷಣ್ಮುಖಪ್ಪ, ಗುಂಡಗತ್ತಿ ಕೊಟ್ರಪ್ಪ, ಎಚ್. ವಸಂತಪ್ಪ. ಮೈದೂರು ರಾಮಣ್ಣ, ಬಾಣದ ಅಂಜಿನಪ್ಪ, ಹರಿಯಮ್ಮನಹಳ್ಳಿ ಶಿವರಾಜ, ಇಸ್ಮಾಯಿಲ್ ಎಲಿಗಾರ್, ಎಚ್.ಎಂ. ಕೊಟ್ರಯ್ಯ, ತೆಲಗಿ ಉಮಾಕಾಂತ, ಇಟ್ಟಿಗುಡಿ ಅಂಜಿನಪ್ಪ, ಎ.ಜಾವೀದ್, ಸಿ.ಜಾಹೀದ್, ಹುಲಿಕಟ್ಟಿ ಚಂದ್ರಪ್ಪ, ಶಂಕರ್, ಸಿದ್ದಲಿಂಗಸ್ವಾಮಿ ಎಚ್.ಎಂ.ಮಲ್ಲಿಕಾರ್ಜುನ್, ಎಂ.ಪಿ.ಗೌತಮ್ ಪ್ರಭು, ಉದಯಶಂಕರ ಸೇರಿದಂತೆ, ಇತರರು ಇದ್ದರು.

# ಶಿವಪಂಚಾಕ್ಷರಿ ಮಂತ್ರದಿಂದ ಜೀವನ ಸಾರ್ಥಕ

## ಹರಿಹರದ ಕಾರ್ಯಕ್ರಮದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳ ಪ್ರತಿಪಾದನೆ

ಹರಿಹರ, ಜು.11- ವೀರಶೈವ ಧರ್ಮದಲ್ಲಿ ಹುಟ್ಟಿದ ಪ್ರತಿಯೊಬ್ಬರೂ ಶ್ರೀ ಗುರುವಿನಿಂದ ಇಷ್ಟಲಿಂಗವನ್ನು ಪಡೆದು, ಮೋಕ್ಷದಾಯಕ ಶಿವ ಪಂಚಾಕ್ಷರಿ ಮಂತ್ರವನ್ನು ಸ್ವೀಕರಿಸಿದರೆ, ಜೀವನ ಸಾರ್ಥಕವಾಗುತ್ತದೆ ಎಂದು ರಂಭಾಪುರಿ ಪೀಠದ ಜಗದ್ಗುರು ಶ್ರೀ ವೀರ ಸೋಮೇಶ್ವರ ಮಹಾ ಸ್ವಾಮೀಜಿ ಅಭಿಪ್ರಾಯಪಟ್ಟರು.



ನಗರದ ದೇವಸ್ಥಾನ ರಸ್ತೆಯ ರೇಣುಕಾ ಮಂದಿರದಲ್ಲಿ ನಡೆದ ಮೂರನೇ ದಿನದ ಆಷಾಢ ಮಾಸದ ಸಮಾರಂಭದಲ್ಲಿ ಇಷ್ಟಲಿಂಗ ಪೂಜೆ ನೆರವೇರಿಸಿದ ನಂತರ ಶ್ರೀಗಳು ಆಶೀರ್ವಚನ ನೀಡಿದರು.

ವೀರಶೈವ ಧರ್ಮಾಭಿಮಾನಿಗಳು ಧರ್ಮ, ಸಂಸ್ಕೃತಿ ಮತ್ತು ಆದರ್ಶಗಳನ್ನು, ಉಳಿಸಿಕೊಂಡು ಬರುವ ನಿಟ್ಟಿನಲ್ಲಿ ಚಿಂತನೆ ನಡಸಬೇಕಾಗಿದೆ. ವೀರಶೈವ ಲಿಂಗಾಯತರು ಎಂದು ಹೇಳಿಕೊಳ್ಳಬೇಕಾದರೆ ಕೊರಳಲ್ಲಿ ರುದ್ರಾಕ್ಷಿ, ಹಣೆಯಲ್ಲಿ ವಿಭೂತಿ ಧಾರಣೆ, ಬಾಯಲ್ಲಿ ಶಿವಪಂಚಾಕ್ಷರಿ ಮಂತ್ರ ಇರಬೇಕು. ಆಗ ವೀರಶೈವರು ಎಂದು ಹೇಳಿಕೊಳ್ಳಬಹುದು. ಇದರಿಂದಾಗಿ ಸಮಾಜದಲ್ಲಿ ಗೌರವ ಘನತೆ ಬಹಳ ದೊಡ್ಡ ಮಟ್ಟದಲ್ಲಿ ದೊರೆಯುತ್ತದೆ. ಇವುಗಳನ್ನು ಸರಿಯಾದ ರೀತಿಯಲ್ಲಿ ಪಾಲಿಸದೇ ಹೋದರೆ ವೀರಶೈವ ಕುಲದಲ್ಲಿ ಹುಟ್ಟಿದ್ದು ಪ್ರಯೋಜನಕ್ಕೆ ಬಾರದು ಎಂದು ಹೇಳಿದರು.

ನಗರದ ಶ್ರೀ ರೇಣುಕ ಮಂದಿರ ಕಟ್ಟಡದ ಜೀರ್ಣೋದ್ಧಾರಕ್ಕೆ ಸ್ಥಳೀಯ ಶಾಸಕ ಬಿ.ಪಿ. ಹರೀಶ್, ತಮ್ಮ ಅನುದಾನದಲ್ಲಿ 5 ಲಕ್ಷ ರೂ. ನೀಡಿರುವುದು ಶ್ಲಾಘನೀಯ ಕಾರ್ಯವಾಗಿದ್ದು, ಸಮಿತಿಯ ಪದಾಧಿಕಾರಿಗಳು ಆ ಹಣವನ್ನು ಕಟ್ಟಡ ಕಾಮಗಾರಿ ಪೂರ್ಣಗೊಳಿಸಲು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಬೇಕು ಎಂದು ಜಗದ್ಗುರುಗಳು ಕಿವಿಮಾತು ಹೇಳಿದರು.

ಮಣಕೂರು ಮಲ್ಲಿಕಾರ್ಜುನ ಶಿವಾಚಾರ್ಯ ಶ್ರೀಗಳು ಮಾತನಾಡಿ, ಲಿಂಗ ಧಾರಣೆ ಮಾಡಿ ಜಪ ಮಾಡುವುದರಿಂದ ಹೃದಯ ರೋಗ ನಿವಾರಿಸಲು ಸಾಧ್ಯವಿದೆ.ಗುರು ಪಾದೋದಕ ಪಡೆಯುವುದರಿಂದ ಬಿ.ಪಿ ರೋಗದಿಂದ ಮುಕ್ತಿ ಪಡೆಯಲು ಸಾಧ್ಯವಿದೆ. ಅಲ್ಲದೇ ಲಿಂಗಪೂಜೆ ಮಾಡುವುದರಿಂದ ಬಹಳಷ್ಟು ಸಂಪತ್ತು, ಆಯಸ್ಸು, ಆಸ್ತಿ ಸೇರಿದಂತೆ ಸಕಲ ಸಂಪತ್ತು ಪಡೆಯಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ವೇದಮೂರ್ತಿ ವಿಶ್ವನಾಥ ಶ್ರೀಗಳು, ಕರೆವಾಡಿ ಮಠದ ಮಳೆ ಮಲ್ಲಿಕಾರ್ಜುನ ಶ್ರೀಗಳು ಲಕ್ಷ್ಮೇಶ್ವರ ಇವರು ಉಪದೇಶ ಭಾಷಣ ಮಾಡಿದರು.

ಈ ಸಂದರ್ಭದಲ್ಲಿ ವಿಶ್ವನಾಥ ಶಾಸ್ತ್ರಿಗಳು, ಸಿದ್ದಯ್ಯ ಹಿರೇಮಠ, ಗುತ್ತೂರು ಹಾಲೇಶಗೌಡ್ರು ಡಿ.ಜಿ. ಶಿವಾನಂದಪ್ಪ, ಟಿ.ಜೆ. ಮುರುಗೇಶಪ್ಪ, ಪೂಜಾರ್ ಅಣ್ಣಪ್ಪ, ಕಂಚಿಕೇರಿ ಕೊಟ್ರೇಶಪ್ಪ, ಪಂಚಾಕ್ಷರಿ, ಎನ್.ಇ. ಸುರೇಶ್, ಜಿ.ವಿ. ಪ್ರವೀಣ್, ಚಂದ್ರಪ್ಪ ಹೊಸಪೇಟೆ, ಹಾಲಸ್ವಾಮಿ, ಗುರುಬಸವರಾಜ್, ಸಮಾಳ ಚಂದ್ರಪ್ಪ, ರಾಚಪ್ಪ, ಬೆಲ್ಲದ ಬಸವರಾಜ್, ಹಂಸಬಾವಿ ಮೋಹನ್ ಕುಮಾರ್, ಕರಿಬಸಪ್ಪ ಕಂಚಿಕೇರಿ, ಸಾಕಮ್ಮ ಅಂಜು ರಾಜೇನವರ್, ಕೊಟ್ರಮ್ಮ ಶಿಲ್ಪಾ ಮುರುಗೇಶಪ್ಪ, ಹಾಲಮ್ಮ ಆನ್ವೇರಿ ಇತರರು ಹಾಜರಿದ್ದರು.

# ಯುಜಿಸಿ - ನೆಟ್ ನಕಲಿ ಪ್ರಶ್ನೆಪತ್ರಿಕೆ ಹರಡಿದ ಯುವಕನ ವಿರುದ್ಧ ಪ್ರಕರಣ

ನವದೆಹಲಿ, ಜು. 11 - ಯುಜಿಸಿ - ನೆಟ್ ತಿರುಚಿದ ಪ್ರಶ್ನೆ ಪತ್ರಿಕೆಯನ್ನು ಟೆಲಿಗ್ರಾಂ ಆಪ್‌ನಲ್ಲಿ ಹರಡಿದ ಯುವಕನ ವಿರುದ್ಧ ಸಿ.ಬಿ.ಐ. ಆರೋಪ ಪಟ್ಟಿ ದಾಖಲಿಸಲಿದೆ.

ಯುವಕ ನಕಲಿ ಪ್ರಶ್ನೆ ಪತ್ರಿಕೆ ಹರಡಿದ ನಂತರ ಯುಜಿಸಿ ಪರೀಕ್ಷೆಯನ್ನು ಮುಂದೂಡಲಾಗಿತ್ತು. ಪ್ರಶ್ನೆ ಪತ್ರಿಕೆ ಸೋರಿಕೆ ಆಗಿರುವ ಅನುಮಾನದ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿತ್ತು.

ನಂತರ ಈ ಬಗ್ಗೆ ಸಿಬಿಐ ತನಿಖೆ ನಡೆಸಿದ್ದು, ಪ್ರಶ್ನೆ ಪತ್ರಿಕೆ ಸೋರಿಕೆಯ ಯಾವುದೇ ದೊಡ್ಡ ಸಂಚು ನಡೆದಿಲ್ಲ ಎಂಬ ತೀರ್ಮಾನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ವಂಚನೆ ಮಾಡಿದ ಆರೋಪದ ಮೇಲೆ ಯುವಕನ ವಿರುದ್ಧ ಪ್ರಕರಣ ದಾಖಲಿಸಲಿದೆ.

ಜೂನ್ 18ರಂದು ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂದು ಶಾಲಾ ವಿದ್ಯಾರ್ಥಿಯೊಬ್ಬ ನಕಲಿ ಚಿತ್ರ ಒಂದನ್ನು ಟೆಲಿಗ್ರಾಂ ಆಪ್ ನಲ್ಲಿ ಬಿಡುಗಡೆ ಮಾಡಿದ್ದ ಎಂದು ಅಧಿಕಾರಿಗಳು ಹೇಳಿದ್ದಾರೆ.

ಯುಜಿಸಿ - ನೆಟ್ ಪರೀಕ್ಷೆಗೆ 11 ಲಕ್ಷ ಅಭ್ಯರ್ಥಿಗಳು ನೋಂದಣಿ ಮಾಡಿಸಿಕೊಂಡಿದ್ದರು. ಉಪನ್ಯಾಸಕರ ಹುದ್ದೆ ನೇಮಕಾತಿ ಹಾಗೂ ವಿಶ್ವವಿದ್ಯಾಲಯಗಳ ಪಿ.ಎಚ್.ಡಿ. ಪ್ರವೇಶಕ್ಕಾಗಿ ಈ ಪರೀಕ್ಷೆ ನಡೆಸಲಾಗುತ್ತಿತ್ತು.

ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂದು ಹೇಳುವ ಮೂಲಕ ಹಣ ಗಳಿಸಲು ಶಾಲಾ ವಿದ್ಯಾರ್ಥಿ ಪ್ರಯತ್ನ ನಡೆಸಿದ್ದ ಎಂಬುದು ತನಿಖೆಯಿಂದ ತಿಳಿದು ಬಂದಿದೆ.

# ಸಿ.ಐ.ಎಸ್.ಎಫ್. ಸಿಬ್ಬಂದಿ ಮೇಲೆ ಸ್ಪೈಸ್ ಜೆಟ್ ಉದ್ಯೋಗಿ ಹಲ್ಲೆ : ಲೈಂಗಿಕ ಪೀಡನೆ ಆರೋಪ

ಜೈಪುರ, ಜು. 11 - ಭದ್ರತಾ ತಪಾಸಣೆ ಬಗ್ಗೆ ವಾಗ್ವಾದ ನಡೆಸಿ ಸಿಐಎಸ್‌ಎಫ್ ಅಧಿಕಾರಿ ಮೇಲೆ ಹಲ್ಲೆ ನಡೆಸಿದ ಆರೋಪದ ಹಿನ್ನೆಲೆಯಲ್ಲಿ ಸ್ಪೈಸ್‌ಜೆಟ್ ಸಿಬ್ಬಂದಿ ಒಬ್ಬರನ್ನು ಬಂಧಿಸಲಾಗಿದೆ. ಈ ಪ್ರಕರಣ ಗಂಭೀರ ಲೈಂಗಿಕ ಪೀಡನೆ ಎಂದು ಸ್ಪೈಸ್ ಜೆಟ್ ಆರೋಪಿಸಿದೆ.

ಸಿಐಎಸ್‌ಎಫ್ ಅಧಿಕಾರಿ ಮಹಿಳೆಯೊಬ್ಬರ ಜೊತೆ ಮಾತನಾಡುತ್ತಿರುವ ಹಾಗೂ ಮಹಿಳೆ ಹಠಾತ್ತನೆ ಎರಡು ಹೆಜ್ಜೆ ಮುಂದೆ ಬಂದು ಕಪಾಳಕ್ಕೆ ಭಾರಿಸಿದ ಸಿಸಿಟಿವಿ ವಿಡಿಯೋ ಕಂಡು ಬಂದಿದೆ.

ಅಸಿಸ್ಟೆಂಟ್ ಸಬ್ ಇನ್ಸ್‌ಕ್ಟರ್ ಗಿರಿರಾಜ್ ಪ್ರಸಾದ್ ನೀಡಿದ ದೂರು ಆಧರಿಸಿ ಅನುರಾಧ ರಾಣಿ ಅವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ವಿಮಾನಯಾನ ಸಂಸ್ಥೆ ಸಹ ಸ್ಥಳೀಯ ಪೊಲೀಸರಲ್ಲಿ ಪ್ರಸಾದ್ ವಿರುದ್ಧ ದೂರು ದಾಖಲಿಸಿದೆ.

ಅನುರಾಧ ರಾಣಿ ಅವರ ಜೊತೆ ಸಿಐಎಸ್‌ಎಫ್ ಅಧಿಕಾರಿ ಅನುಚಿತವಾಗಿ ವರ್ತಿಸಿದ್ದರು ಎಂದು ವಿಮಾನಯಾನ ಸಂಸ್ಥೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

ಅನುಮತಿ ಇಲ್ಲದ ದ್ವಾರದಿಂದ ರಾಣಿ ಬಂದ ಕಾರಣ ಅವರನ್ನು ತಡೆಯಲಾಗಿತ್ತು ಎಂದು ಸಿಐಎಸ್‌ಎಫ್ ದೂರಿನಲ್ಲಿ ಹೇಳಲಾಗಿದೆ.

ಈ ವಿಷಯವನ್ನು ಪರಸ್ಪರ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಲು ಅವರು ನಿರಾಕರಿಸಿದ್ದರು. ನಂತರ ಮರು ಆಲೋಚನೆ ಮಾಡಿ ಲೈಂಗಿಕ ಹಲ್ಲೆಯ ದೂರು ದಾಖಲಿಸಿದ್ದಾರೆ ಎಂದು ಸಿಐಎಸ್‌ಎಫ್ ಅಧಿಕಾರಿಗಳು ಹೇಳಿದ್ದಾರೆ.

ಬೆಳಗ್ಗೆ ಘಟನೆ ನಡೆದ ಸ್ಥಳದಲ್ಲಿ ಮಹಿಳಾ ಸಿಐಎಸ್‌ಎಫ್ ಸಿಬ್ಬಂದಿ ಸೇರಿದಂತೆ ಆರು ಜನರಿದ್ದರು. ಇಡೀ ದೃಶ್ಯ ಸಿಸಿಟಿವಿಯಲ್ಲಿ ಸರಿಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

# ಮನುಸ್ಮೃತಿ ಕಲಿಸುವ ಪ್ರಸ್ತಾವನೆಗೆ ಕಾಂಗ್ರೆಸ್ ವಿರೋಧ

ನವದೆಹಲಿ, ಜು. 11 - ದೆಹಲಿ ವಿಶ್ವವಿದ್ಯಾಲಯದ ಕಾನೂನು ವಿದ್ಯಾರ್ಥಿಗಳಿಗೆ ಮನುಸ್ಮೃತಿ ಬೋಧಿಸುವ ಪ್ರಸ್ತಾವನೆಯನ್ನು ಕಾಂಗ್ರೆಸ್ ಪ್ರಬಲವಾಗಿ ವಿರೋಧಿಸಿದೆ.

ಸಂವಿಧಾನದ ಮೇಲೆ ದಾಳಿ ನಡೆಸುವ ಆರ್.ಎಸ್.ಎಸ್.ನ ದಶಕಗಳ ಪ್ರಯತ್ನ ಈಡೇರಿಸಲು ಪ್ರಧಾನಮಂತ್ರಿ ನರೇಂದ್ರ ಮೋದಿ ಈ ರೀತಿ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆರೋಪಿಸಿದ್ದಾರೆ.

ದೆಹಲಿ ವಿಶ್ವವಿದ್ಯಾಲಯದ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಕಾನೂನು ವಿದ್ಯಾರ್ಥಿಗಳಿಗೆ ಮನುಸ್ಮೃತಿ ಕಲಿಸುವ ಪ್ರಸ್ತಾಪವನ್ನು ಪರಿಶೀಲಿಸಲಾಗಿತ್ತು.

# ಸೌಭಾಗ್ಯ ಬೀಳಗಿಮಠ್ ಅವರಿಗೆ ಅಯೋಧ್ಯೆಯಲ್ಲಿ ನಾಳೆ ಸನ್ಮಾನ



ದಾವಣಗೆರೆ, ಜು. 11 - ನಗರದ ಸೌಭಾಗ್ಯ ಬೀಳಗಿಮಠ್ ಅವರು ಈ ಸಾಲಿನ ಯುಪಿಎಸ್‌ಇ ಪರೀಕ್ಷೆಯಲ್ಲಿ ಭಾರತಕ್ಕೆ 101ನೇ ರ್‍ಯಾಂಕ್ ಗಳಿಸಿದ್ದು, ಅವರಿಗೆ ನಾಡಿದ್ದು ದಿನಾಂಕ 13ರ ಶನಿವಾರ ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ನವದೆಹಲಿ 'ಸಂಕಲ್ಪ' ಸಂಸ್ಥೆಯವರು ಸನ್ಮಾನ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

# ಕುರಿ, ಮೇಕೆ ಸಾಕಾಣಿಕೆ ತರಬೇತಿ

ದಾವಣಗೆರೆ, ಜು. 11 - ನಗರದ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿಯನ್ನು ಇದೇ ದಿನಾಂಕ 15 ಮತ್ತು 16 ರಂದು ಆಯೋಜಿಸ ಲಾಗಿದೆ ಎಂದು ಪಶು ವೈದ್ಯಾಧಿಕಾರಿಗಳು ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 08192-233787

# ಬಸವನಹಳ್ಳಿ ಪಂಚಾಯಿತಿಗೆ ಸುಜಾತಾ ಅಧ್ಯಕ್ಷೆ



ಹೊನ್ನಾಳಿ, ಜು.11- ತಾಲ್ಲೂಕಿನ ಬಸವನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಸುಜಾತಾ, ಎಂ.ಸಿ. ರೇಣುಕಪ್ಪ ಇವರು 6 ಮತಗಳ ಪಡೆದು ಚುನಾವಣೆ ಮೂಲಕ ಆಯ್ಕೆಯಾಗಿರುವುದಾಗಿ ಚುನಾವಣಾಧಿಕಾರಿ ಹಿರಿಯ ತೋಟಗಾರಿಕಾ ಸಹಾಯಕ ನಿರ್ದೇಶಕರಾದ ರೇಖಾ ತಿಳಿಸಿರುವರು.

12 ಸದಸ್ಯರಿರುವ ಪಂಚಾಯಿತಿಯಲ್ಲಿ ಅಧ್ಯಕ್ಷರ ಸ್ಥಾನಕ್ಕೆ ಪ್ರತಿ ಸ್ಪರ್ಧಿಯಾಗಿ ಸ್ಪಂದಿಸಿದ ಚಂದ್ರಮ್ಮ ನಾಲ್ಕು ಮತಗಳ ಪಡೆದರು, ಇಬ್ಬರು ಸದಸ್ಯರು ತಟಸ್ಥ ನಿಲುವು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪಂಚಾಯಿತಿ ಉಪಾಧ್ಯಕ್ಷರಾದ ಪಿ.ಆರ್.ರತ್ನ, ಬಸವನಹಳ್ಳಿ ಗ್ರಾಮದ ಚಂದ್ರಮ್ಮ, ಹೆಚ್.ಎಸ್.ಹಳದಮ್ಮ, ಡಿ.ಹರೀಶ್, ಬಿ.ಜಿ ರಾಜಶೇಖರ್, ಡಿ.ಮಲ್ಲಪ್ಪ, ಹೆಚ್.ಡಿ. ಬಸವರಾಜಪ್ಪ, ಮಾದನಬಾವಿ ಗೀತಾ, ಆರ್.ಎಸ್. ರುದ್ರಪ್ಪ, ಡಿ.ಜಿ.ಸುಜಾತ, ಎಸ್.ಅಶ್ವಿನಿ, ಕೆ.ಎಸ್. ಕೆಂಚಪ್ಪ, ಡಿಡಿಸಿಸಿ ಬ್ಯಾಂಕ್ ನಿರ್ದೇಶಕ ಸುರೇಂದ್ರ, ಕಾಂಗ್ರೆಸ್ ಮುಖಂಡ ಮಾದನಬಾವಿ ರೇಣುಕಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಿ.ಚನ್ನಯ್ಯ, ಸಿಬ್ಬಂದಿ ಶೇಖರಪ್ಪ, ರಾಜಪ್ಪ, ಗುಳ್ಳೇಶಪ್ಪ, ಜೈರಾಮ್, ರಮೇಶ್, ಕಲ್ಲೇಶ್ ಇನ್ನಿತರರಿದ್ದರು.

# ದಿವ್ಯಾಂಗ, ಒಬಿಸಿ ಮೀಸಲಾತಿ ದುರ್ಬಳಕೆ


**ಐಎಎಸ್ ಅಧಿಕಾರಿ ವಿರುದ್ಧ ತನಿಖೆ**

ನವದೆಹಲಿ, ಜು. 11 – ಮಹಾರಾಷ್ಟ್ರದ ವಿವಾದಿತ ಐಎಎಸ್ ಅಧಿಕಾರಿ ಪೂಜಾ ಖೇಡ್ಕರ್ ಅವರು ದಿವ್ಯಾಂಗ ಹಾಗೂ ಇತರೆ ಹಿಂದುಳಿದ ವರ್ಗಗಳ ಮೀಸಲಾತಿ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ಆರೋಪಗಳ ತನಿಖೆಗಾಗಿ ಕೇಂದ್ರ ಸರ್ಕಾರ ಏಕ ಸದಸ್ಯ ಸಮಿತಿ ರಚಿಸಿದೆ.

2023ರ ತಂಡದ ಅಧಿಕಾರಿಯಾಗಿರುವ ಖೇಡ್ಕರ್ ಅವರ ವಿರುದ್ಧ ಆರೋಪಗಳು ಕೇಳಿ ಬಂದಿದ್ದವು. ಈ ಬಗ್ಗೆ ತನಿಖೆ ನಡೆಸಲು ಹೆಚ್ಚುವರಿ ಕಾರ್ಯದರ್ಶಿ ಹಂತದ ಅಧಿಕಾರಿಯನ್ನು ನಿಯೋಜಿಸಲಾಗಿದೆ.

ಪೂಜಾ ಅವರು ಈ ಹಿಂದೆ ಪೂನಾದಲ್ಲಿ ಕಾರ್ಯನಿರ್ವಹಿಸಿದ್ದರು. ಅಲ್ಲಿ ಅವರು ಎಲ್ಲರನ್ನೂ ಬೆದರಿಸಿದ್ದರು ಹಾಗೂ ಖಾಸಗಿ ಕಾರಿಗೆ ಕೆಂಪು ದೀಪ ಬಳಸಿದ್ದರು ಎಂದು ಆರೋಪಿಸಲಾಗಿತ್ತು. ನಂತರ ಅವರನ್ನು ವಶಿಮ್ ಜಿಲ್ಲೆಗೆ ವರ್ಗಾಯಿಸಲಾಗಿದೆ. ದಿವ್ಯಾಂಗ ಹಾಗೂ ಇತರೆ ಹಿಂದುಳಿದ ವರ್ಗಗಳ ಮೀಸಲಾತಿ ಬಳಸಿಕೊಂಡು ಖೇಡ್ಕರ್ ಅವರು ಐಎಎಸ್ ಸೇವೆಗೆ ಆಯ್ಕೆಯಾಗಿದ್ದಾರೆ ಎಂದು ಆರೋಪಿಸಲಾಗಿತ್ತು.


## ದೊಡ್ಡಬಾತಿ ಶ್ರೀಮತಿ ಸಾಕಮ್ಮ ಕೆ. ನಿಧನ



ದಾವಣಗೆರೆ ತಾ. ದೊಡ್ಡಬಾತಿ ಗ್ರಾಮದ ವಾಸಿ ದಿ. ಐಗೂರು ಚಂದ್ರಪ್ಪ ಎನ್.ಕೆ. ಇವರ ಧರ್ಮಪತ್ನಿ

**ಶ್ರೀಮತಿ ಸಾಕಮ್ಮ ಕೆ.**


ಇವರು, ದಿನಾಂಕ : 11.07.2024ರ ಗುರುವಾರ ಸಂಜೆ 6.15 ಗಂಟೆಗೆ ನಿಧನರಾಗಿರುತ್ತಾರೆ ಎಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 62 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ದಿನಾಂಕ : 12.07.2024ರ ಶುಕ್ರವಾರ ಬೆಳಗ್ಗೆ 10.30 ಗಂಟೆಯಿಂದ 12ರ ವರೆಗೆ ಮೃತರ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ಇರಿಸಲಾಗುವುದು. ನಂತರ ದೊಡ್ಡಬಾತಿಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ :**

**ಪುತ್ರ : ಸಾಗರ್ ಎನ್.ಸಿ. ಪುತ್ರಿ : ರೂಪಾದೇವಿ ಎನ್.ಸಿ.**
**ಸೊಸೆ : ಶೃತಿ ಹೆಚ್.ಎಂ, ಅಳಿಯ : ಕುಮಾರ್,**
**ದಿ. ಚಂದ್ರಪ್ಪ ಹಾಗೂ ಸಹೋದರರು, ಐಗೂರು ಗ್ರಾಮಸ್ಥರು ಮತ್ತು ದೊಡ್ಡಬಾತಿ ಗ್ರಾಮಸ್ಥರು. ಮೊ : 95380 08748**

## 12ನೇ ವರ್ಷದ ಪುಣ್ಯಸ್ಮರಣೆ




**ಲಿಂ. ಜಕ್ಕ ಪಿ. ನಾರಾಯಣಪ್ಪನವರು**

ನೀವು ನಮ್ಮನ್ನಗಲಿ ಇಂದಿಗೆ (12.7.2024) ಹನ್ನೆರಡು ವರ್ಷಗಳಾದವು.
ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ ಅಚ್ಚಳಿಯದೇ ಉಳಿದಿದೆ.
ನಿಮ್ಮ ವ್ಯಕ್ತಿತ್ವ, ಮಾರ್ಗದರ್ಶನ ಹಾಗೂ ಆಶೀರ್ವಾದದೊಂದಿಗೆ
ಮುನ್ನಡೆಯುತ್ತಿರುವ ಮತ್ತು ಸದಾ ನಿಮ್ಮ ಸ್ಮರಣೆಯಲ್ಲಿರುವ,

**ಪತ್ನಿ : ಪದ್ದಮ್ಮ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**

## 38ನೇ ವರ್ಷದ ಪುಣ್ಯಸ್ಮರಣೆ



ನಿಧನ : 12.07.1986

**ದಿ|| ಜಿ. ರುದ್ರಪ್ಪ**

ಬಾಂಬೆ ಆರ್ ಸನ್ಸ್ ಕಂಪನಿಯ ಮಾಲೀಕರು, ದಾವಣಗೆರೆ.

*ನೀವು ನಮ್ಮನ್ನಗಲಿ ಇಂದಿಗೆ 38 ವರ್ಷಗಳಾದವು.*
*ನಾವುಗಳೆಲ್ಲರೂ ನಿಮ್ಮ ಆಶೀರ್ವಾದವನ್ನು ಹೊತ್ತು,*
*ನೀವು ತೋರಿಸಿದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ ಬಂದಿರುವ*
*ಹಾಗೂ ಸದಾ ನಿಮ್ಮ ಸ್ಮರಣೆಯಲ್ಲಿರುವ...*

ಮಗಳು-ಅಳಿಯ : **ಶೋಭಾ ವೆಂಕೋಬಪ್ಪ**
ನಿ. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, ದಾವಣಗೆರೆ.

**ಡಾ|| ರಶ್ಮಿ ತಿಪ್ಪೇಸ್ವಾಮಿ, ಪೂಜಾ ಅಭಿಷೇಕ್ ಮತ್ತು ಮಕ್ಕಳು, ಸೊಸೆ, ಮೊಮ್ಮಕ್ಕಳು ಹಾಗೂ ಮರಿಮೊಮ್ಮಕ್ಕಳು**, ವಿದ್ಯಾನಗರ, ದಾವಣಗೆರೆ.

# ಜಿಲ್ಲಾಸ್ಪತ್ರೆಗೆ 26 ಕೋಟಿ ರೂ.

## ಎಂ.ಆರ್.ಐ. ಯಂತ್ರ, ಸುಸಜ್ಜಿತ ಲ್ಯಾಬ್ : ಸಚಿವ ದಿನೇಶ್

## 50 ಕೋಟಿ ರೂ. ಅನುದಾನ ನೀಡುವಂತೆ ಎಸ್ಸೆಸ್ಸೆಂ ಬೇಡಿಕೆ

ದಾವಣಗೆರೆ, ಜು.11- ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಹೊಸ ಬ್ಲಾಕ್ ನಿರ್ಮಾಣಕ್ಕೆ 17 ಕೋಟಿ ರೂ. ಹಾಗೂ ವಿವಿಧ ಕಾಮಗಾರಿಗಳಿಗೆ 6 ಕೋಟಿ ರೂ. ಬಿಡುಗಡೆ ಮಾಡಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ನಗರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 2-3 ತಿಂಗಳಲ್ಲೇ ಎಂ.ಆರ್.ಐ. ಸ್ಕ್ಯಾನ್ ಯಂತ್ರ ಒದಗಿಸಲಾಗುವುದು. ಇದಕ್ಕಾಗಿ ಸದ್ಯದಲ್ಲೇ ಟೆಂಡರ್ ಕರೆಯಲಾಗುವುದು. ಇದರಿಂದ ರೋಗಿಗಳಿಗೆ ಉಚಿತ ಎಂ.ಆರ್.ಐ. ಸೌಲಭ್ಯ ಸಿಗಲಿದೆ ಎಂದರು.

ಆಸ್ಪತ್ರೆಗೆ ಇಂಟಿಗ್ರೇಟೆಡ್ ಪಬ್ಲಿಕ್ ಹೆಲ್ತ್ ಲ್ಯಾಬ್ ಸಹ ಮಂಜೂರಾಗಿದೆ. ಸಿ.ಜಿ. ಆಸ್ಪತ್ರೆಗೆ ಅಗತ್ಯ ಎಲ್ಲ ಸೌಲಭ್ಯ ಕಲ್ಪಿಸಲು ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.

**50 ಕೋಟಿ ರೂ.ಗೆ ಬೇಡಿಕೆ:** ಜಿಲ್ಲಾಸ್ಪತ್ರೆಗೆ 50 ಕೋಟಿ ರೂ. ಅನುದಾನ, ಹೊಸ ಕಟ್ಟಡ, ಎಂ. ಆರ್.ಐ. ಸ್ಕ್ಯಾನ್, ಪ್ರಯೋಗಾಲಯ, ಸಿಬ್ಬಂದಿ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ರಾಜ್ಯ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಆಗ್ರಹಿಸಿದರು.

ವಿಶ್ವ ಜನಸಂಖ್ಯಾ ದಿನಾಚರಣೆ ಕಾರ್ಯಕ್ರಮ ದಲ್ಲಿ ಮಾತನಾಡಿದ ಅವರು, ಇತ್ತೀಚೆಗಷ್ಟೇ ಆಸ್ಪತ್ರೆಯ ತಾರಸಿಯ ಒಂದು ಭಾಗ ಕುಸಿದಿತ್ತು. 4 ಜನ ಸ್ವಲ್ಪದರಲ್ಲೇ ಪಾರಾಗಿದ್ದರು ಎಂದು ಹೇಳಿದರು.

ಆಸ್ಪತ್ರೆಗೆ 17 ಕೋಟಿ ರೂ. ಅನುದಾನ ನೀಡುವುದಾಗಿ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಆದರೆ, ಇಷ್ಟು ಅನುದಾನ ಸಾಲದು. 50 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದಲ್ಲಿ ಸುಸಜ್ಜಿತವಾದ ಕಟ್ಟಡ ಹೊಂದಲು ಸಾಧ್ಯ ಎಂದರು.

ಇದರ ಜೊತೆಗೆ ಎಂ.ಆರ್.ಐ. ಹಾಗೂ ಸಿ.ಟಿ. ಸ್ಕ್ಯಾನ್ ರೀತಿಯ ಸೌಲಭ್ಯಗಳ ಅಗತ್ಯ ಇದೆ. ತಂತ್ರಜ್ಞರ ನೇಮಕವೂ ಆಗಬೇಕಿದೆ ಎಂದರು.

ಚಾಮರಾಜನಗರದಲ್ಲಿರುವ ಹಳೆಯ ಹೆರಿಗೆ ಆಸ್ಪತ್ರೆಯಲ್ಲೂ ಮೂಲಭೂತ (4ನೇ ಪುಟಕ್ಕೆ)

### ಹಿಂದಿನವರು ಮಾತನಾಡಿದ್ರು ಮಾಡಲಿಲ್ಲ: ಎಸ್ಸೆಸ್ಸೆಂ

**ಹಿಂದೆ ಅಧಿಕಾರದಲ್ಲಿದ್ದವರು ಬರೀ ಮಾತನಾಡಿದರೇ ಹೊರತು ಜಿಲ್ಲಾಸ್ಪತ್ರೆಯನ್ನು ಅಭಿವೃದ್ಧಿ ಮಾಡಲಿಲ್ಲ. ಕೋವಿಡ್ ಸಂದರ್ಭದಲ್ಲಂತೂ ಲೂಟಿ ಹೊಡೆದರು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಿಡಿಕಾರಿದರು.**

**ಬೆಂಗಳೂರಿನ ಜಯದೇವ ಆಸ್ಪತ್ರೆಯ ಮಾದರಿಯಲ್ಲಿ ಜಿಲ್ಲಾಸ್ಪತ್ರೆ ಆವರಣದಲ್ಲಿ ಸೂಪರ್ ಸ್ಪೆಷಾಲಿಟಿ ಬ್ಲಾಕ್ ನಿರ್ಮಿಸಲು ಆರೋಗ್ಯ ಸಚಿವರು ಸಮ್ಮತಿ ನೀಡಿದ್ದಾರೆ. ಇದರಿಂದ ಕಾರ್ಡಿಯಾ, ನ್ಯೂರೋಲಜಿ ಅಂತಹ ಸಮಸ್ಯೆಗಳಿಗೆ ಅನುಕೂಲವಾಗಲಿದೆ ಎಂದು ಸಚಿವರು ಹೇಳಿದರು.**

---

**ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ಪೂರೈಸಲಾಗುವ ಔಷಧಗಳ ಗುಣಮಟ್ಟ ನಿರೀಕ್ಷೆಯ ಮಟ್ಟದಲ್ಲಿ ಇಲ್ಲ. ಈ ಬಗ್ಗೆ ನಿರಂತರ ನಿಗಾ ಹಾಗೂ ಹಠಾತ್ ಭೇಟಿ ಕ್ರಮದ ಅಗತ್ಯವಿದೆ.**

**- ಡಾ.ಪ್ರಭಾ ಮಲ್ಲಿಕಾರ್ಜುನ್, ಸಂಸದೆ**



**ನೋಡಿ ಹೇಗಾಗಿದೆ..?**

ಜಿಲ್ಲಾಸ್ಪತ್ರೆಯ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ತೋರಿಸುತ್ತಿರುವ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್

# ತಾಯಿಯಿಂದಲೇ ಮಗುವಿಗೆ ಆರೋಗ್ಯ ಭಾಗ್ಯ

## ವಿಶ್ವ ಜನಸಂಖ್ಯಾ ದಿನಾಚರಣೆಯಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್



ದಾವಣಗೆರೆ, ಜು. 10 - ಆರೋಗ್ಯವಂತ ತಾಯಿಯಿಂದ ಮಗುವಿಗೂ ಆರೋಗ್ಯ ಸಿಗುತ್ತದೆ. ಹೀಗಾಗಿ ತಾಯಂದಿರ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಆರೋಗ್ಯ ಸಂಘಗಳ ವತಿಯಿಂದ ನಗರದ ಬಿ.ಐ.ಇ.ಟಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ವಿಶ್ವ ಜನಸಂಖ್ಯಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜನನದ ಮೊದಲ ಎರಡು ವರ್ಷಗಳು ಮಗುವಿನ ಆರೋಗ್ಯದ ಮೇಲೆ ಜೀವನವಿಡೀ ಹೆಚ್ಚಿನ ಪರಿಣಾಮ ಬೀರುತ್ತವೆ. ಹೀಗಾಗಿ ಆರೋಗ್ಯವಂತ ಜೀವನಕ್ಕಾಗಿ, ತಾಯಿಯ ಆರೋಗ್ಯಕ್ಕೆ ಒತ್ತು ನೀಡಬೇಕಿದೆ ಎಂದು ಸಚಿವರು ಹೇಳಿದರು. ಪ್ರತಿ ಮಗುವೂ ದೇಶಕ್ಕೆ ಆಸ್ತಿ ಆಗುವಂತಿರಬೇಕೇ ಹೊರತು ಹೊರೆಯಾಗಬಾರದು. ಪ್ರತಿಯೊಂದು ಮಗುವೂ ಆಸ್ತಿಯಾದಾಗ ಮಾತ್ರ ಭಾರತ ವಿಶ್ವ ಗುರು ಆಗಲು ಸಾಧ್ಯ ಎಂದು ಸಚಿವರು ತಿಳಿಸಿದರು.

ಹೆಣ್ಣು ಜನಿಸಿದರೆ ಹೊರೆ ಎಂಬ ಭಾವನೆ ಹಲವರಲ್ಲಿದೆ. ಇದರಿಂದಾಗಿ ಹೆಣ್ಣು ಭ್ರೂಣ ಹತ್ಯೆ ಘಟನೆಗಳು ನಡೆಯುತ್ತಿವೆ ಹಾಗೂ ಲಿಂಗಾನುಪಾತದಲ್ಲಿ ವ್ಯತ್ಯಾಸವಾಗಿದೆ. ಹೆಣ್ಣು ಮಕ್ಕಳೂ ಗಂಡಿಗಿಂತ ಯಾವುದೇ ರೀತಿಯಲ್ಲೂ ಕಡಿಮೆ ಇಲ್ಲ ಎಂಬುದನ್ನು ಮನಗಾಣಬೇಕಿದೆ ಎಂದರು.

### ಡಬ್ಲ್ಯೂ.ಹೆಚ್.ಓ. ಜೊತೆ ಒಡಂಬಡಿಕೆಗೆ ಸಹಿ

ಜನನ ನಿಯಂತ್ರಣ ಸಾಧನಗಳಿಗೆ ಸಂಬಂಧಿಸಿದಂತೆ ಡಬ್ಲ್ಯೂ.ಹೆಚ್.ಓ. ಸಂಘಟನೆಯ ಜೊತೆ ಒಡಂಬಡಿಕೆ ಒಂದಕ್ಕೆ ಇದೇ ಸಂದರ್ಭದಲ್ಲಿ ಸಹಿ ಹಾಕಲಾಯಿತು.

ಹೊಸ ರೀತಿಯ ಚುಚ್ಚುಮದ್ದು ಹಾಗೂ ಅಳವಡಿಕೆ ವಿಧಾನಗಳ ಮೂಲಕ ಜನನ ನಿಯಂತ್ರಣದ ಕ್ರಮಗಳನ್ನು ಈಗ ರಾಜ್ಯದ 4 ಜಿಲ್ಲೆಗಳಲ್ಲಿ ಜಾರಿಗೆ ತರಲಾಗಿದೆ. ಇದನ್ನು 10 ಜಿಲ್ಲೆಗಳಿಗೆ ವಿಸ್ತರಿಸಲಾಗುವುದು ಎಂದು ಒಪ್ಪಂದದ ನಂತರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮಾತನಾಡಿ, ಜನಸಂಖ್ಯಾ ಸ್ಫೋಟದಿಂದ ಮೂಲಭೂತ ಸೌಲಭ್ಯಗಳ ಸಮಸ್ಯೆ ಉಲ್ಬಣಿಸುತ್ತದೆ. ಭಾರತದಲ್ಲಿ ಪ್ರತಿ ಚದುರ ಕಿ.ಮೀ. ಪ್ರದೇಶದಲ್ಲಿರುವ ಜನರ ಪ್ರಮಾಣ ಈಗಾಗಲೇ ಅತಿಯಾಗಿ ಹೆಚ್ಚಾಗಿದೆ. ಜನಸಂಖ್ಯಾ ನಿಯಂತ್ರಣಕ್ಕೆ ಹೆಚ್ಚಿನ ಒತ್ತು ನೀಡಬೇಕಿದೆ ಎಂದರು.

ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, 1951ರಲ್ಲಿ 36 ಕೋಟಿ ಇದ್ದ ಜನಸಂಖ್ಯೆ ಈಗ 140 ಕೋಟಿಗೆ ತಲುಪಿದೆ. ಜನಸಂಖ್ಯಾ ಹೆಚ್ಚಳ ತಡೆಯಲು ಸರ್ಕಾರಗಳು ನಿರಂತರವಾಗಿ ಯೋಜನೆಗಳನ್ನು ರೂಪಿಸುತ್ತಾ ಬಂದಿವೆ. ಈ ಯೋಜನೆಗಳಿಗೆ ಜನರೂ ಸ್ಪಂದಿಸಬೇಕು ಎಂದು ಹೇಳಿದರು.

ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ಶಿಕ್ಷಣದಿಂದ ಮಾತ್ರ ಜನಸಂಖ್ಯಾ ನಿಯಂತ್ರಣ ಸಾಧ್ಯ. ಧರ್ಮಗಳ ನಡುವೆ ಶಿಕ್ಷಣ ಹೆಚ್ಚಿಸಿಕೊಳ್ಳುವ ಬಗ್ಗೆ ಸ್ಪರ್ಧೆ ಇರಬೇಕೇ ಹೊರತು, ನಮ್ಮ ಧರ್ಮೀಯರ ಸಂಖ್ಯೆ ಹೆಚ್ಚಿಸಿಕೊಳ್ಳಬೇಕು ಎಂಬ ಸ್ಪರ್ಧೆ ಬೇಡ ಎಂದರು.

ಶಾಸಕ ದೇವೇಂದ್ರಪ್ಪ ಮಾತನಾಡಿ, ಜನಸಂಖ್ಯೆ ಹೀಗೆಯೇ ಬೆಳೆಯುತ್ತಾ ಹೋದರೆ ಮನುಷ್ಯ ಮನುಷ್ಯನಾಗಿ ಬದುಕಲು ಸಾಧ್ಯವಾಗದು. ಕುಟುಂಬಗಳು ಮಿತವಾಗಿದ್ದಾಗ ಮಾತ್ರ ಮಕ್ಕಳ ಬಗ್ಗೆ ಅಗತ್ಯ ಕಾಳಜಿ ವಹಿಸಲು ಸಾಧ್ಯ ಎಂದರು.

ಮಾಜಿ ಪ್ರಾಂಶುಪಾಲ ಜಿ.ಎನ್. ಮಲ್ಲಿಕಾರ್ಜುನಪ್ಪ ಉಪನ್ಯಾಸ ನೀಡಿ, ದೇಶ ಬೆಳವಣಿಗೆ ಕಾಣಲು ಉತ್ತಮ ಆರೋಗ್ಯ, ಶಿಕ್ಷಣ ಹಾಗೂ ಆಡಳಿತ ಅಗತ್ಯ ಎಂದರು.

ವೇದಿಕೆಯ ಮೇಲೆ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಜಿಲ್ಲಾ ಪಂಚಾಯ್ತಿ ಸಿಇಒ ಸುರೇಶ್ ಇಟ್ನಾಳ್, ಮಾಜಿ ಶಾಸಕ ಎಸ್. ರಾಮಪ್ಪ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಬಿ.ಆರ್. ಚಂದ್ರಿಕ, ನವೀನ್ ಭಟ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಷಣ್ಮುಖಪ್ಪ, ಪಾಲಿಕೆ ಸದಸ್ಯರಾದ ಎ. ನಾಗರಾಜ್, ಗಡಿಗುಡಾಳ್ ಮಂಜುನಾಥ್, ಚಮನ್ ಸಾಬ್, ಮುಖಂಡರಾದ ಡಿ. ಬಸವರಾಜ್ ಮತ್ತಿತರರು ಉಪಸ್ಥಿತರಿದ್ದರು.

# ಮಹರ್ಷಿ ವಾಲ್ಮೀಕಿ ನಿಗಮದ ಅಕ್ರಮ ತನಿಖೆಗೆ ಕೇಂದ್ರ-ರಾಜ್ಯಗಳ ಘರ್ಷಣೆ

ಬೆಂಗಳೂರು, ಜು. 11 - ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ರೂ. ಅಕ್ರಮ ವರ್ಗಾವಣೆ ಹಗರಣ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಘರ್ಷಣೆಗೆ ಕಾರಣವಾಗಿದೆ.

ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ.)ದ ಅಧಿಕಾರಿಗಳು ಕಳೆದ ಎರಡು ದಿನಗಳಿಂದ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪದ ಹಿನ್ನೆಲೆಯಲ್ಲಿ ಆರೋಪಿಗಳ ಮನೆ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿ ದಾಖಲೆಗಳನ್ನು ವಶ ಪಡಿಸಿಕೊಂಡು ಕೆಲವರನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

ಆದರೆ, ನಿಗಮದಲ್ಲಿ ನಡೆದಿರುವ ಹಗರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಕಡತಗಳು ಎಸ್ಐಟಿ ವಶದಲ್ಲಿವೆ.

ಇ.ಡಿ. ಅಧಿಕಾರಿಗಳು ನಿನ್ನೆ ನಿಗಮದ ಕಚೇರಿ ಮೇಲಿನ ದಾಳಿ ಸಂದರ್ಭದಲ್ಲಿ ತನಿಖೆಗೆ ನಿಗಮದ ಸಿಬ್ಬಂದಿ ಸಹಕರಿಸದ ಹಿನ್ನೆಲೆಯಲ್ಲಿ ಬಲವಂತವಾಗಿ ಕಪಾಟುಗಳನ್ನು ಒಡೆದು ಕೆಲವು ದಾಖಲೆಗಳನ್ನು ವಶಕ್ಕೆ ಪಡೆದರು.

ಆದರೆ, ಈ ದಾಖಲೆಗಳು ಮಹತ್ವದ್ದಲ್ಲವೆಂದು ಅರಿತ ಇಡಿ ಅಧಿಕಾರಿಗಳು, ನಿಗಮದ ಸಿಬ್ಬಂದಿಯನ್ನು ಪ್ರಶ್ನಿಸಿದಾಗ, ಎಲ್ಲಾ ಕಡತಗಳು ಎಸ್ಐಟಿ ವಶದಲ್ಲಿವೆ ಎಂಬ ಮಾಹಿತಿ ನೀಡಿದ್ದಾರೆ.

ನಂತರ ಇ.ಡಿ. ಅಧಿಕಾರಿಗಳು ಎಸ್ಐಟಿ ಅಧಿಕಾರಿಗಳನ್ನು ಸಂಪರ್ಕಿಸಿ ದಾಖಲೆಗಳನ್ನು ತಮ್ಮ ವಶಕ್ಕೆ ನೀಡುವಂತೆ ಕೋರಿದ್ದಾರೆ. ಇದಕ್ಕೆ, ನಾವೇ ವಿಚಾರಣೆ ನಡೆಸುತ್ತಿದ್ದು, ನಿಮಗೆ ದಾಖಲೆಗಳನ್ನು ನೀಡಲು ಸಾಧ್ಯವಿಲ್ಲ ಎಂದು ಸಂಸ್ಥೆ ಮುಖ್ಯಸ್ಥರು ಇ.ಡಿ. ಅಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿದ್ದಾರೆ.

ಎಸ್ಐಟಿ ನೀಡಿದ ಮಾಹಿತಿಯ ಕುರಿತು ಇ.ಡಿ.ಯವರು ದೆಹಲಿಯ ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ, ಸಿಐಡಿ ಆವರಣದಲ್ಲಿರುವ ತನಿಖಾ ಸಂಸ್ಥೆ ಮೇಲೆ ದಾಳಿ ನಡೆಸಿ ದಾಖಲೆಗಳ ವಶಕ್ಕೆ ಕಾರ್ಯತಂತ್ರ ರೂಪಿಸಿದರು. ಇದರ ಮಾಹಿತಿ ತಿಳಿಯುತ್ತಿದ್ದಂತೆ ಸಿಐಡಿ ಹಾಗೂ ಎಸ್ಐಟಿ ಅಧಿಕಾರಿಗಳು, ದಾಳಿ ತಡೆಯಲು ತಮ್ಮ ಕಚೇರಿ ಆವರಣಕ್ಕೆ ಕೆಎಸ್ಆರ್‌ಪಿ ಪ್ಲಟೂನ್‌ಗಳನ್ನು ಕರೆಸಿ, ತಮ್ಮ ಭದ್ರತೆಗೆ ನಿಯೋಜಿಸಿಕೊಂಡರು.

ಮುಂಜಾನೆ 00-30ರವರೆಗೂ ಎಲ್ಲಾ ಅಧಿಕಾರಿಗಳು ಕಚೇರಿಯಲ್ಲೇ ಬೀಡು ಬಿಟ್ಟಿದ್ದರು. ಇ.ಡಿ. ಅಧಿಕಾರಿಗಳು ಬರುವುದಿಲ್ಲ ಎಂಬುದು ಮನದಟ್ಟಾದ ನಂತರ ಮನೆಗೆ ತೆರಳಿದರು. ಇಂದೂ ಕೂಡಾ ಸಿಐಡಿ ಕಚೇರಿಗೆ ಬಿಗಿ ಭದ್ರತೆ ಒದಗಿಸಲಾಗಿದೆ. ಇಡಿ (4ನೇ ಪುಟಕ್ಕೆ)

# ಖಾಸಗಿ ವಲಯಕ್ಕೆ ರಕ್ಷಣೆಯ ಏಳು ಯೋಜನೆಗಳು

ನವದೆಹಲಿ, ಜು. 11 - ದೇಶದ ಅತ್ಯುನ್ನತ ರಕ್ಷಣಾ ಸಂಶೋಧನಾ ಸಂಸ್ಥೆಯಾದ ಡಿ.ಆರ್.ಡಿ.ಒ., ತನ್ನ ಏಳು ಹೊಸ ಯೋಜನೆಗಳನ್ನು ಖಾಸಗಿ ವಲಯಕ್ಕೆ ನೀಡಿದೆ. ಇದರಲ್ಲಿ ಜಲಾಂತರದಿಂದ ಮಾನವ ರಹಿತ ವೈಮಾನಿಕ ವಾಹನಗಳನ್ನು ಸಿಡಿಸುವು ದು ಹಾಗೂ ದೂರಗಾಮಿ ರಿಮೋಟ್ ನಿಯಂತ್ರಿತ ವ್ಯವಸ್ಥೆಗಳೂ ಸೇರಿವೆ.

ರಕ್ಷಣಾ ವಲಯದಲ್ಲಿ ಉತ್ಪಾದನೆ ಹೆಚ್ಚಿಸುವ ಸಲುವಾಗಿ ರಕ್ಷಣಾ ಸಚಿವಾಲಯದ ತಾಂತ್ರಿಕ ಅಭಿವೃದ್ಧಿ ನಿಧಿಯ ಮೂಲಕ ಈ ಯೋಜನೆಗಳಿಗೆ ಅನುಮತಿ ನೀಡಲಾಗಿದೆ. ಪುಣೆಯ ಸಾಗರ್ ಡಿಫೆನ್ಸ್ ಇಂಜಿನಿಯರಿಂಗ್ ಕಂಪನಿಗೆ ಜಲಾಂತರದಿಂದ ಮಾನವರಹಿತ ವೈಮಾನಿಕ ವಾಹನಗಳ ಉಡಾವಣೆ ಯೋಜನೆ ನೀಡಲಾಗಿದೆ.

# ಇನ್ನೂ 2 ತಿಂಗಳು ಡೆಂಗ್ಯೂ ಹಾವಳಿ ಇರಲಿದೆ

ದಾವಣಗೆರೆ, ಜು. 11 - ಮಳೆಗಾಲವಾದ್ದರಿಂದ ಇನ್ನೂ 2 ತಿಂಗಳು ಡೆಂಗ್ಯೂ ಹಾವಳಿ ಇರುತ್ತದೆ. ಜನರು ಹೆಚ್ಚು ಜಾಗೃತರಾಗಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮನೆಯ ಸುತ್ತ ನೀರು ಶೇಖರಣೆಯಾಗದಂತೆ ನೋಡಿಕೊಳ್ಳಬೇಕು. ಆರೋಗ್ಯ



ಇಲಾಖೆ ಕೂಡ ಜನರಲ್ಲಿ ಜಾಗೃತಿ ಮೂಡಿಸುತ್ತಿದೆ. ಪ್ರತೀ ಶುಕ್ರವಾರ ಅಭಿಯಾನದ ರೀತಿಯಲ್ಲಿ ಈಡಿಸ್ ಸೊಳ್ಳೆಯ ಉತ್ಪತ್ತಿ ತಾಣಗಳನ್ನು ನಾಶಪಡಿಸಲಾಗುತ್ತಿದೆ ಎಂದರು.

ರಾಜ್ಯದಲ್ಲಿ ಡೆಂಗ್ಯೂ ಪ್ರಕರಣಗಳು ಹೆಚ್ಚುತ್ತಿರುವುದು ನಿಜ. ಆದರೆ ವೈದ್ಯಕೀಯ ತುರ್ತು ಪರಿಸ್ಥಿತಿ ಘೋಷಣೆ ಮಾಡುವ ಸ್ಥಿತಿ ನಿರ್ಮಾಣವಾಗಿಲ್ಲ ಎಂದರು. ಡೆಂಗ್ಯೂ ನಿಯಂತ್ರಣ ವಿಚಾರದಲ್ಲಿ ಆರೋಗ್ಯ ಇಲಾಖೆ ನಿರಂತರ ನಿಗಾ ವಹಿಸುತ್ತಿದೆ. ಬೆಡ್ ಅಥವಾ ಔಷಧ ಕೊರತೆಯಿಲ್ಲ. ಡೆಂಗ್ಯೂ ಬಗ್ಗೆ ತಾಂತ್ರಿಕ ಸಲಹಾ ಸಮಿತಿಯವರೊಂದಿಗೆ ಚರ್ಚೆ ನಡೆಸಿದ್ದು, ಮೆಡಿಕಲ್ ಎಮರ್ಜೆನ್ಸಿ ಘೋಷಿಸುವ ಅಗತ್ಯವಿಲ್ಲ ಎಂದು ಸಲಹಾ ಸಮಿತಿ ತಿಳಿಸಿದೆ ಎಂದರು.

ಹೆಚ್ಚು ಡೆಂಗ್ಯೂ ಪ್ರಕರಣ ಕಂಡುಬರುವ ಸ್ಥಳಗಳಲ್ಲಿ ಫೀವರ್ ಕ್ಲಿನಿಕ್ ತೆರೆದು ಟೆಸ್ಟಿಂಗ್ ಹೆಚ್ಚಿಸಲು ಜಿಲ್ಲಾಧಿಕಾರಿಗಳಿಗೆ ಹಾಗೂ ಜಿಲ್ಲಾ ಪಂಚಾಯ್ತಿ ಸಿಇಒಗಳಿಗೆ ಸೂಚಿಸಲಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಚಿಕಿತ್ಸೆಗೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಜನರು ಹೆಚ್ಚು ಜಾಗೃತರಾಗಿ ಎಚ್ಚರಿಕೆ ವಹಿಸುವುದೇ ಮುಖ್ಯ ಎಂದರು.

ಡೆಂಗ್ಯೂ ಸೊಳ್ಳೆಗಿಂತ ಬಿಜೆಪಿ ನಾಯಕರ ಸುಳ್ಳುಗಳೇ ವೇಗವಾಗಿ ಹರಡುತ್ತಿವೆ. ಡೆಂಗ್ಯೂ ನಿಯಂತ್ರಣ ವಿಚಾರದಲ್ಲಿ ಆಡಳಿತ ಪಕ್ಷಕ್ಕೆ ಸಹಕರಿಸಬೇಕು. ಆದರೆ ಡೆಂಗ್ಯೂ ಹರಡುವ ಸೊಳ್ಳೆಗಳಿಗಿಂತ ವಿಪಕ್ಷ ನಾಯಕರ ಸುಳ್ಳುಗಳು ಹೆಚ್ಚು ಹರಡುತ್ತಿವೆ ಎಂದು ಬಿಜೆಪಿ ನಾಯಕರ ಹೇಳಿಕೆಗಳನ್ನು ಟೀಕಿಸಿದರು.

ಡೆಂಗ್ಯೂ ರಕ್ತ ಪರೀಕ್ಷೆಗೆ ಸರ್ಕಾರ 300 ರೂ ದರ ನಿಗದಿಪಡಿಸಿದೆ. ಇದಕ್ಕಿಂತ ಹೆಚ್ಚು ಶುಲ್ಕ (4ನೇ ಪುಟಕ್ಕೆ)

# ಮಧ್ಯಪ್ರದೇಶ : ಶಾಲೆಗಳು 65 ಕೋಟಿ ರೂ. ಶುಲ್ಕ ಮರಳಿಸಲು ಆದೇಶ

ಜಬಲ್ಪುರ, ಜು. 11 - ಮಧ್ಯಪ್ರದೇಶದ ಹತ್ತು ಖಾಸಗಿ ಶಾಲೆಗಳು ಕಳೆದ ಏಳು ವರ್ಷಗಳಲ್ಲಿ ಪಡೆದಿರುವ 65 ಕೋಟಿ ರೂ ಹೆಚ್ಚುವರಿ ಬೋಧನಾ ಶುಲ್ಕವನ್ನು ಮರಳಿಸಬೇಕು ಎಂದು ಆದೇಶಿಸಲಾಗಿದೆ.

81,000 ವಿದ್ಯಾರ್ಥಿಗಳಿಗೆ ಈ ಹಣ ಮರಳಿಸಬೇಕು ಎಂದು ಜಬಲ್ಪುರ ಜಿಲ್ಲೆಯ ಅಧಿಕಾರಿಗಳು ಆದೇಶಿಸಿದ್ದಾರೆ. ಶಾಲೆಗಳು ನಿಯಮ ಮೀರಿ ಈ ಶುಲ್ಕ ಸಂಗ್ರಹಿಸಿದ್ದವು ಎಂದು ಜಿಲ್ಲಾ ಶಿಕ್ಷಣ ಅಧಿಕಾರಿ ಘನಶ್ಯಾಮ್ ಸೋನಿ ತಿಳಿಸಿದ್ದಾರೆ.

2018-19ರಿಂದ 2024-25ರ ನಡುವೆ 81,117 ವಿದ್ಯಾರ್ಥಿಗಳಿಂದ 64.58 ಕೋಟಿ ರೂ.ಗಳ ಶುಲ್ಕವನ್ನು ಹೆಚ್ಚುವರಿಯಾಗಿ ಸಂಗ್ರಹಿಸಲಾಗಿತ್ತು.

ಈ ಶಾಲೆಗಳ ವಿರುದ್ಧ ಜಬಲ್ಪುರ ಜಿಲ್ಲಾ ಆಡಳಿತ 11 ಎಫ್.ಐ.ಆರ್.ಗಳನ್ನು ದಾಖಲಿಸಿತ್ತು. ಅಕ್ರಮವಾಗಿ ಪಠ್ಯ ಪುಸ್ತಕಗಳ ಬೆಲೆ ಹೆಚ್ಚಿಸಿದ ಕಾರಣಕ್ಕಾಗಿ ಕೆಲ ಪುಸ್ತಕದ ಅಂಗಡಿಗಳ ಮಾಲೀಕರ ವಿರುದ್ಧವು ಪ್ರಕರಣ ದಾಖಲಿಸಲಾಗಿತ್ತು.

ನಿಯಮಗಳ ಪ್ರಕಾರ ಶಾಲೆಗಳು ಶೇಕಡ 10ಕ್ಕಿಂತ ಹೆಚ್ಚಿನ ಶುಲ್ಕ ಹೆಚ್ಚಿಸಬೇಕಾದಲ್ಲಿ ಜಿಲ್ಲಾ ಆಡಳಿತದಿಂದ ಅನುಮತಿ ಪಡೆಯಬೇಕು. ಶೇಕಡ 15ಕ್ಕಿಂತ ಹೆಚ್ಚಿನ ಶುಲ್ಕ ಪಡೆಯಲು ರಾಜ್ಯ ಸರ್ಕಾರದಿಂದ ಅನುಮತಿ ಪಡೆಯಬೇಕು ಎಂದು ಅಧಿಕಾರಿಗಳು ಹೇಳಿದ್ದಾರೆ.

# ತಮಿಳುನಾಡಿಗೆ ನಿತ್ಯ 1 ಟಿಎಂಸಿ ನೀರಿಗೆ ಆದೇಶ

ಬೆಂಗಳೂರು, ಜು. 11 - ರಾಜ್ಯದ ಕಾವೇರಿ ಜಲಾನಯನ ಭಾಗದಿಂದ ತಮಿಳುನಾಡಿಗೆ ಪ್ರತಿನಿತ್ಯ ಒಂದು ಟಿಎಂಸಿ (ಸರಾಸರಿ 11,500 ಕ್ಯೂಸೆಕ್ಸ್) ನೀರನ್ನು ಈ ತಿಂಗಳಾಂತ್ಯದವರೆಗೂ ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಸಮಿತಿ (ಸಿಡಬ್ಲ್ಯೂಆರ್‌ಸಿ) ಆದೇಶಿಸಿದೆ.

ಜುಲೈ 12ರಿಂದ 31 ರವರೆಗೂ ಬಿಳಿಗುಂಡ್ಲುವಿನಲ್ಲಿ ಸಂಚಿತ ನೀರಿನ ಹರಿವಿನ ಪ್ರಮಾಣವನ್ನು ಖಚಿತಪಡಿಸಿಕೊಳ್ಳುವಂತೆ ಸಮಿತಿ ಆದೇಶಿಸಿದೆ.

ಜಲಾನಯನ ವ್ಯಾಪ್ತಿಗೆ ಬರುವ ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ವಾದ-ಪ್ರತಿವಾದ ಆಲಿಸಿದ ನಂತರ ಸಿಡಬ್ಲ್ಯೂಆರ್‌ಸಿ ಈ ಆದೇಶ ಮಾಡಿದೆ.

ದೆಹಲಿಯಲ್ಲಿಂದು ಜರುಗಿದ ಸಿಡಬ್ಲ್ಯೂ ಆರ್‌ಸಿಯ 99ನೇ ಸಭೆಯ ಚರ್ಚೆಯಲ್ಲಿ ರಾಜ್ಯ ಸರ್ಕಾರ, ಜೂನ್ 1ರಿಂದ ಜುಲೈ 9ರವರೆಗೆ ಕರ್ನಾಟಕದ ನಾಲ್ಕು ಜಲಾಶಯಗಳಿಗೆ ಸಂಚಿತ ಒಳಹರಿವು 41.651 ಟಿ.ಎಂ.ಸಿ ಇದ್ದು, ರಾಜ್ಯದ ನಾಲ್ಕು ಜಲಾಶಯಗಳಿಗೆ ಸಂಚಿತ ಒಳಹರಿವಿನ ಕೊರತೆಯು ಸರಾಸರಿ 28.71 ಇದೆ ಎಂದು ವಾದಿಸಿತು.

ಕರ್ನಾಟಕದ ನಾಲ್ಕು ಜಲಾಶಯಗಳಲ್ಲಿನ ಸಂಗ್ರಹಣೆಯು 58.668 ಟಿಎಂಸಿ ಇದ್ದು, ಮೆಟ್ಟೂರಿನಿಂದ 4.905 ಟಿಎಂಸಿ ಮತ್ತು ಭವಾನಿಯಿಂದ 0.618 ಟಿಎಂಸಿ (ಒಟ್ಟು 5.542 ಟಿಎಂಸಿ) ನದಿಗೆ ಬಿಡುಗಡೆ ಮಾಡಿರುವುದಲ್ಲದೆ, ತಮಿಳುನಾಡಿನ ಮೂರು ಜಲಾಶಯಗಳಲ್ಲಿ 24.705 ಟಿಎಂಸಿ ಇದೆ.

ನೀರು ಬಿಡುಗಡೆಗೆ ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು ಸಮಿತಿಯು ಜುಲೈ 25, 2024 ರವರೆಗೆ ಕಾಯುವುದು ಸೂಕ್ತವೆಂದು ಕರ್ನಾಟಕ ಅಭಿಪ್ರಾಯ ವ್ಯಕ್ತಪಡಿಸಿತು. ತದನಂತರ, ರಾಜ್ಯದ ಜಲಾಶಯಗಳಿಂದ ನೀರು ಬಿಡುವ ಬಗ್ಗೆ ಸೂಕ್ತ ನಿರ್ಧಾರಕ್ಕೆ ಬರಲು ನೀರು ನಿರ್ವಹಣಾ ಸಮಿತಿ ವಸ್ತುಸ್ಥಿತಿಯನ್ನು ಸಮಂಜಸವಾಗಿ ಪರಿಗಣಿಸಬಹುದು ಎಂದು ಹೇಳಿತು. ಆದರೆ, ತಮಿಳುನಾಡು, ಪ್ರಸಕ್ತ ಜಲ ವರ್ಷದಲ್ಲಿ ಪರಿಸ್ಥಿತಿ ಸಾಮಾನ್ಯವಾಗಿದ್ದು ಮತ್ತು ಕರ್ನಾಟಕವು ಸಾಮಾನ್ಯ ಒಳಹರಿವನ್ನು ಪಡೆದಿದೆ. ಆದ್ದರಿಂದ ಸುಪ್ರೀಂಕೋರ್ಟ್ ಮಾರ್ಪಡಿಸಿದಂತೆ ಕಾವೇರಿ ನೀರು ಇತ್ಯರ್ಥ ನ್ಯಾಯಮಂಡಳಿ (ಸಿಡಬ್ಲ್ಯೂಡಿಟಿ) ಆದೇಶದಂತೆ ಕರ್ನಾಟಕವು ಬಿಳಿಗುಂಡ್ಲುವಿನಲ್ಲಿ ನಿಗದಿತ ಹರಿವನ್ನು ಖಚಿತಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿತ್ತು.

# ಹೊಸಕುಂದವಾಡದಲ್ಲಿ ಒಂದೇ ದಿನ 7 ಸಾವು



ದಾವಣಗೆರೆ, ಜು.11- ತಾಲ್ಲೂಕಿನ ಹೊಸ ಕುಂದವಾಡದಲ್ಲಿ ಗುರುವಾರ ಒಂದೇ ದಿನ 7 ಜನರು ಪ್ರತ್ಯೇಕವಾಗಿ ಮೃತಪಟ್ಟ ಘಟನೆ ನಡೆದಿದೆ.

ಮಾರಮ್ಮ (70), ಸಂತೋಷ (30), ಈರಮ್ಮ (60), ಸುನೀಲ್ (25), ಶಾಂತಮ್ಮ (65) ಭೀಮಕ್ಕ (70) ಹಾಗೂ ಎರಡು ದಿನದ ನವಜಾತ ಶಿಶು ಮೃತಪಟ್ಟವರು.

ಈ ಪೈಕಿ ಮಾರಮ್ಮ, ಈರಮ್ಮ, ಶಾಂತಮ್ಮ, ಭೀಮಕ್ಕ ವಯೋಸಹಜದಿಂದ ಮೃತಪಟ್ಟಿದ್ದು, ಸಂತೋಷ, ಸುನೀಲ್ ಹಾಗೂ ನವಜಾತ ಶಿಶು ಅನಾರೋಗ್ಯದಿಂದ ಮೃತಪಟ್ಟಿದ್ದಾರೆ.

ಒಂದೇ ದಿನ ಏಳು ಜನರು ಮೃತಪಟ್ಟಿದ್ದರಿಂದ ಅಂತ್ಯಕ್ರಿಯೆಗೆ ಸ್ಮಶಾನ ಇಲ್ಲದ ಕಾರಣ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

5000ಕ್ಕೂ ಅಧಿಕ ಜನಸಂಖ್ಯೆ ಇರುವ ಗ್ರಾಮದಲ್ಲಿ ಸ್ಮಶಾನ ಇಲ್ಲ. ಇದುವರೆಗೂ ಪಕ್ಕದ ಹಳೆಕುಂದುವಾಡ ಗ್ರಾಮಕ್ಕೆ ಹೋಗಿ ಗ್ರಾಮಸ್ಥರು ಶವ ಸಂಸ್ಕಾರ ಮಾಡುತ್ತಿದ್ದರು. ಆದರೆ ಮಾರಿ ಜಾತ್ರೆ ಮಾಡುವ ವಿಚಾರದಲ್ಲಿ ಎರಡೂ ಗ್ರಾಮಸ್ಥರ ಮಧ್ಯೆ ಈಚೆಗೆ ಮನಸ್ತಾಪವಾಗಿತ್ತು. ಈ ಕಾರಣ ಶವ ಸಂಸ್ಕಾರಕ್ಕೆ ಹಳೆಕುಂದುವಾಡ ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿದರು.

ಇದರಿಂದ ಅಸಮಾಧಾನಗೊಂಡ ಗ್ರಾಮಸ್ಥರು ಸ್ಮಶಾನಕ್ಕೆ ಜಾಗ ನೀಡುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು.ಪ್ರತಿಭಟನೆ ಹಿನ್ನೆಲೆಯಲ್ಲಿ ಸ್ಥಳಕ್ಕೆ ತಹಶೀಲ್ದಾರ್ ಹಾಗೂ ಅಧಿಕಾರಿಗಳು ಭೇಟಿ ನೀಡಿ ಸಮಸ್ಯೆ ಆಲಿಸಿದರು.

'ಗ್ರಾಮದಲ್ಲಿ ಸ್ಮಶಾನಕ್ಕಾಗಿ 3.30 ಎಕರೆ ಸ್ಥಳ ಗುರುತಿಸಲಾಗಿದೆ. ಅದಕ್ಕೆ ಒಪ್ಪಿಗೆ ನೀಡಿ ಗ್ರಾಮಕ್ಕೆ ಸ್ಮಶಾನ ಮಂಜೂರು ಮಾಡಬೇಕು ಎಂದು ಒತ್ತಾಯಿಸಿ ಹಲವು ಬಾರಿ ಮನವಿ ಸಲ್ಲಿಸಲಾಗಿದೆ. ಆದರೂ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ. ಸಚಿವರು, ಶಾಸಕರು, ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಗಿದೆ ಎಂದು ಗ್ರಾಮದ ಮುಖಂಡ ಮಹೇಶಪ್ಪ ದೂರಿದರು. 'ನಮ್ಮ ಗ್ರಾಮದಲ್ಲಿ ಸ್ಮಶಾನ ಇಲ್ಲ. ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೆ ಕ್ರಮ ಕೈಗೊಳ್ಳುತ್ತಿಲ್ಲ. ಶೀಘ್ರ ಸ್ಮಶಾನ ಮಂಜೂರು ಮಾಡಬೇಕು' ಎಂದು ಗ್ರಾಮದ ಎ. ಶಿವಕುಮಾರ್ ಒತ್ತಾಯಿಸಿದರು.

'ಕುಂದುವಾಡ ಗ್ರಾಮಕ್ಕೆ ಈಗಾಗಲೇ 3 ಎಕರೆ ಸ್ಮಶಾನ ಇದೆ. ಗ್ರಾಮಸ್ಥರು ಹೆಚ್ಚುವರಿ ಸ್ಮಶಾನ ಜಾಗಕ್ಕಾಗಿ ಮನವಿ ಸಲ್ಲಿಸಿದ್ದಾರೆ. ಅದಕ್ಕೆ ಇನ್ನೊಂದು ಇಲಾಖೆಯ ಅನುಮತಿ ಬೇಕಿದೆ. ಅನುಮತಿ ಪಡೆಯುವ ಪ್ರಕ್ರಿಯೆ ನಡೆಯುತ್ತಿದೆ. ಗ್ರಾಮದಲ್ಲಿ ಶವ ಸಂಸ್ಕಾರಕ್ಕೆ ಯಾವುದೇ ತೊಂದರೆ ಇಲ್ಲ. ಅಂತ್ಯಸಂಸ್ಕಾರಕ್ಕೆ ಯಾರಾದರೂ ಅಡ್ಡಿಪಡಿಸಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಸ್ಥಳಕ್ಕೆ ಭೇಟಿ ನೀಡಿದ ತಹಶೀಲ್ದಾರ್ ಎಚ್ಚರಿಸಿದರು. ನಂತರ ಹಳೆ ಕುಂದವಾಡ ರುದ್ರ ಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಿದರು.

### ಅಂತ್ಯಕ್ರಿಯೆಗೆ ಸ್ಮಶಾನ ಇಲ್ಲದೆ ಪರದಾಟ, ಪ್ರತಿಭಟನೆ, ತಹಶೀಲ್ದಾರ್ ಭೇಟಿ

# ಸಿಐಎಸ್ಎಫ್, ಬಿಎಸ್ಎಫ್ ಹಾಗೂ ಸಿಆರ್‌ಪಿಎಫ್‌ಗಳಲ್ಲಿ ಅಗ್ನಿವೀರರಿಗೆ ಶೇ.10ರ ಮೀಸಲಾತಿ

ನವದೆಹಲಿ, ಜು. 11 - ಮಾಜಿ ಅಗ್ನಿವೀರರಿಗೆ ಸಿಐಎಸ್ಎಫ್, ಬಿಎಸ್ಎಫ್ ಹಾಗೂ ಸಿಆರ್‌ಪಿಎಫ್‌ಗಳಲ್ಲಿ ಶೇ.10ರ ಮೀಸಲಾತಿ ಕಲ್ಪಿಸಲಾಗುವುದು. ಕೇಂದ್ರ ಗೃಹ ಸಚಿವಾಲಯದ ನಿರ್ಧಾರದಂತೆ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಮಾಜಿ ಅಗ್ನಿವೀರರಿಗೆ ದೈಹಿಕ ಪರೀಕ್ಷೆ ಹಾಗೂ ವಯೋಮಿತಿಯಲ್ಲಿ ವಿನಾಯಿತಿ ನೀಡಲಾಗುವುದು . 2022 ರಲ್ಲಿ ಅಗ್ನಿವೀರ ಯೋಜನೆ ಆರಂಭಿಸಲಾಗಿತ್ತು. ಅಗ್ನಿವೀರರನ್ನು ನೇಮಿಸಿಕೊಳ್ಳುವ ಬಗ್ಗೆ ಕೇಂದ್ರದ ಹಲವಾರು ಸಂಸ್ಥೆಗಳು ಹಾಗೂ ಇಲಾಖೆಗಳು ಈಗಾಗಲೇ ಯೋಜನೆಗಳನ್ನು ಪ್ರಕಟಿಸಿವೆ.

# ಹಿಂದುಳಿದವನು ಎಂದು ಕುತಂತ್ರ : ಸಿಎಂ ಸಿದ್ದರಾಮಯ್ಯ

ಮೈಸೂರು, ಜು. 11 - ಹಿಂದುಳಿದ ವರ್ಗಕ್ಕೆ ಸೇರಿದ ನಾನು ಎರಡನೇ ಬಾರಿ ಮುಖ್ಯಮಂತ್ರಿಯಾಗಿದ್ದು ಬಿಜೆಪಿಯ ಎಲ್ಲರಿಗೂ ಹೊಟ್ಟೆಯುರಿ. ಅದಕ್ಕಾಗಿ ಕುತಂತ್ರ ಮಾಡುತ್ತಿದ್ದಾರೆ. ಇಂತಹ ಷಡ್ಯಂತ್ರಕ್ಕೆಲ್ಲ ನಾನು ಹೆದರುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಕುರಿತು ಮೈಸೂರಿನಲ್ಲಿ ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ಮೂಡಾ ಮೊದಲಿನಿಂದಲೂ ಗಬ್ಬೆದ್ದು ಹೋಗಿದ್ದು, ಅದನ್ನು ಸ್ವಚ್ಛ ಮಾಡಬೇಕಿದೆ. ನಮ್ಮ ಪ್ರಕರಣ ಹಗರಣವಲ್ಲ ಎಂದು ಹೇಳಿದರು.

# ಮಕ್ಕಳಲ್ಲಿ ಕಲಿಕೆಯ ಕೌಶಲ್ಯ ಹೆಚ್ಚಿಸಬೇಕು

## ಮಲೇಬೆನ್ನೂರು : ಶೈಕ್ಷಣಿಕ ಕಾರ್ಯಾಗಾರದಲ್ಲಿ ಶಿಕ್ಷಕರಿಗೆ ಬಿಇಓ ಹನುಮಂತಪ್ಪ ಕರೆ



ಮಲೇಬೆನ್ನೂರು, ಜು.11- ಮಕ್ಕಳಲ್ಲಿ ಕಲಿಕೆಯ ಕೌಶಲ್ಯ ಹೆಚ್ಚಿಸುವ ಉದ್ದೇಶದಿಂದ ಕಾರ್ಯಾಗಾರಗಳನ್ನು ಶಿಕ್ಷಣ ಇಲಾಖೆ ಆಯೋಜಿಸುತ್ತಿದೆ. ಆದರೆ, ಈ ಬಗ್ಗೆ ಕೆಲವು ಖಾಸಗಿ ಶಾಲೆಗಳು, ಶಿಕ್ಷಕರು ನಿರ್ಲಕ್ಷ್ಯ ತೋರಿ, ಗೈರು ಹಾಜರಿ ಆಗುತ್ತಿದ್ದು, ಅಂತಹವರಿಗೆ ನೋಟೀಸ್ ಜಾರಿ ಮಾಡುವುದಾಗಿ ಬಿಇಓ ಹನುಮಂತಪ್ಪ ಖಡಕ್ ಎಚ್ಚರಿಕೆ ನೀಡಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಇಂದು ಹಮ್ಮಿಕೊಂಡಿದ್ದ ಹರಿಹರ ತಾಲ್ಲೂಕಿನ ಪ್ರೌಢಶಾಲೆಗಳ ಆಂಗ್ಲ ಭಾಷಾ ಶಿಕ್ಷಕರ ಶೈಕ್ಷಣಿಕ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹರಿಹರ ತಾಲ್ಲೂಕಿನಲ್ಲಿ 64 ಪ್ರೌಢಶಾಲೆಗಳಿದ್ದು, ಕಾರ್ಯಾಗಾರಕ್ಕೆ 35 ಶಿಕ್ಷಕರು ಮಾತ್ರ ಹಾಜರಿದ್ದೀರಿ. ಈ ಬಾರಿ 10ನೇ ತರಗತಿ ಫಲಿತಾಂಶ ನಮ್ಮನ್ನು ತಲೆ ತಗ್ಗಿಸುವಂತೆ ಮಾಡಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಶಿಕ್ಷಣ ಇಲಾಖೆ ನೀಡಿರುವ ಶೈಕ್ಷಣಿಕ ಶಿಕ್ಷಣ ಮಾರ್ಗದರ್ಶಿ ಪುಸ್ತಕವನ್ನು ಇಲ್ಲಿಗೆ ಬಂದಿರುವ ಎಷ್ಟು ಜನ ಓದಿದ್ದೀರಿ ? ಎಂದು ಪ್ರಶ್ನಿಸಿದ ಬಿಇಓ ಹನುಮಂತಪ್ಪ ಅವರು ಪುಸ್ತಕದಲ್ಲಿರುವ ಶೈಕ್ಷಣಿಕ ಅಂಶ ಹಾಗೂ ಆಡಳಿತ ಸುತ್ತೋಲೆಗಳ ಬಗ್ಗೆ ಶಿಕ್ಷಕರಿಗೆ ತಿಳಿಸಿದರು.

ಮಕ್ಕಳಿಗೆ ನೈತಿಕ ಶಿಕ್ಷಣ ನೀಡುವ ಉದ್ದೇಶ ನಿಮಗಿದ್ದರೆ, ಮೊದಲು ನೀವು ಇಂತಹ ಕಾರ್ಯಾಗಾರಗಳಿಗೆ ಕಡ್ಡಾಯವಾಗಿ ಹಾಜರಾಗಿ ವಿಷಯಗಳನ್ನು ತಿಳಿದುಕೊಳ್ಳಬೇಕು. ಶಾಲಾ ತರಗತಿಗಳಿಗೆ ಪಾಠ ಮಾಡಲು ತೆರಳುವ ಮುನ್ನ ನೀವು ಮನೆಯಲ್ಲಿ ಪುಸ್ತಕವನ್ನು ಓದಿಕೊಂಡು ಚೆನ್ನಾಗಿ ಸಿದ್ದರಾಗಿರಬೇಕು ಎಂದು ಶಿಕ್ಷಕರಿಗೆ ಕಿವಿಮಾತು ಹೇಳಿದರು.

8ನೇ ತರಗತಿ ಮಕ್ಕಳಿಗೆ ಪ್ರತಿ 3ನೇ ಶನಿವಾರ 'ಬ್ಯಾಗ್‌ಲೇಸ್ ಡೇ' ಜಾರಿಗೊಳಿಸಿದ್ದು, ಆ ದಿನ ಮಕ್ಕಳಿಗೆ ಸಂಭ್ರಮದ ಶನಿವಾರಿಗುತ್ತದೆ. ಆ ವೇಳೆ ನೀವು ಮಕ್ಕಳಿಗೆ ವಿವಿಧ ಆಟ, ಮನರಂಜನೆ, ರಂಗೋಲಿ ಇತ್ಯಾದಿ ಮೂಲಕ ಶಿಕ್ಷಣದ ಹರಿವು ಮೂಡಿಸುವ ಕೆಲಸ ಮಾಡಬೇಕೆಂದು ಶಿಕ್ಷಕರಿಗೆ ತಿಳಿಸಿದ ಹನುಮಂತಪ್ಪ ಅವರು, ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಿ, 10ನೇ ತರಗತಿ ಫಲಿತಾಂಶ ಹೆಚ್ಚಿಸುವಂತೆ ಕರೆ ನೀಡಿದರು.

ಹರಿಹರ ಗಾಂಧಿ ಮೈದಾನ ಪ್ರೌಢಶಾಲೆಯ ಶಿಕ್ಷಕ ಹಾಗೂ ಸಂಪನ್ಮೂಲ ವ್ಯಕ್ತಿ ನಾಗರಾಜ್ ಅವರು, ಆಂಗ್ಲ ಭಾಷಾ ವಿಷಯ ಕುರಿತು ಶಿಕ್ಷಕರಿಗೆ ತರಬೇತಿ ನೀಡಿದರು.

ಪ್ರೌಢಶಾಲೆಯ ಉಪಪ್ರಾಚಾರ್ಯ ಜಗದೀಶ್ ಉಜ್ಜಮ್ಮನವರ್ ಅಧ್ಯಕ್ಷತೆ ವಹಿಸಿದ್ದರು. ಬೀರಲಿಂಗೇಶ್ವರ ಬಾಲಕರ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಸಿ.ಜಯ್ಯಣ್ಣ, ಹಾಲಿವಾಣ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಹನುಮಂತಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಓ.ಜಿ.ಮಂಜುನಾಥ್, ಸರ್ಕಾರಿ ಉರ್ದು ಪ್ರೌಢಶಾಲೆಯ ಶಿಕ್ಷಕ ರೇವಣ ಸಿದ್ದಪ್ಪ ಅಂಗಡಿ ಮತ್ತಿತರರು ವೇದಿಕೆಯಲ್ಲಿದ್ದರು.

ಶಿಕ್ಷಕ ಬಾಲರಾಜ್ ಸ್ವಾಗತಿಸಿದರು. ಆಂಗ್ಲ ಭಾಷಾ ವೇದಿಕೆ ಅಧ್ಯಕ್ಷ ಸುರೇಶ್ ಎಸ್. ಮೂಲಿಮನಿ ನಿರೂಪಿಸಿ, ವಂದಿಸಿದರು.

# ಪರಿಶಿಷ್ಟರ ಅನುದಾನ ಗ್ಯಾರಂಟಿಗೆ ಬಳಕೆ ತಪ್ಪಲ್ಲ

ಬೆಂಗಳೂರು, ಜು. 11 - ಎಸ್‌ಸಿಪಿ/ಟಿಎಸ್‌ಪಿ ಅನುದಾನ ಹಣ ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳುತ್ತಿರುವುದ ರಲ್ಲಿ ಯಾವುದೇ ತಪ್ಪಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಸಮರ್ಥಿಸಿಕೊಂಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಡೀ ದೇಶದಲ್ಲಿ ಆಂಧ್ರ ಪ್ರದೇಶದ ನಂತರ ಕರ್ನಾಟಕದಲ್ಲಿ ಪರಿಶಿಷ್ಟರ ಕಲ್ಯಾಣಕ್ಕಾಗಿ ಪ್ರತ್ಯೇಕ ಅನುದಾನ ನೀಡಿ ಬಳಸಲು ಕಾಯ್ದೆ ತಂದಿದ್ದೇವೆ. ರಾಷ್ಟ್ರೀಯ ಆಯೋಗ ನೋಟೀಸ್ ಜಾರಿ ಮಾಡು ವುದಿದ್ದರೆ, ಕೇಂದ್ರ ಸರ್ಕಾರಕ್ಕೆ ನೀಡಬೇಕು. ಅನುದಾನವನ್ನು ನಮ್ಮ ಸರ್ಕಾರ ಪರಿಶಿಷ್ಟ ಜಾತಿಗೆ ವಿನಿಯೋಗಿಸುತ್ತಿದೆ. ಇದಕ್ಕೆ ನೋಟೀಸ್ ನೀಡಿರುವ ರಾಷ್ಟ್ರೀಯ ಆಯೋಗಕ್ಕೆ ನಾಚಿಕೆಯಾಗಬೇಕು ಎಂದರು.

ಮಹರ್ಷಿ ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ವಂಚನೆ ನಡೆದಿರುವುದು ಸತ್ಯ. ಇದರ ಸತ್ಯಾಸತ್ಯತೆ ನಮಗೆ ಗೊತ್ತಿದೆ, ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ ರಚಿಸಿ ತನಿಖೆ ನಡೆಸುತ್ತಿದೆ. ಅಕ್ರಮವಾಗಿ ವರ್ಗಾವಣೆಯಾದ ಹಣವನ್ನು ಈಗಾಗಲೇ ವಶಪಡಿಸಿಕೊಳ್ಳಲಾಗುತ್ತಿದೆ ಎಂದು ಇದೇ ಸಂದರ್ಭದಲ್ಲಿ ಹೇಳಿದರು.

ಯಾವುದೇ ದೂರು ಇಲ್ಲದೆ ಇ.ಡಿ. ದಾಳಿ ನಡೆಸುವ ಅಗತ್ಯವಿರಲಿಲ್ಲ. ಅವರು ಯಾವ ರೀತಿ ತನಿಖೆ ಮಾಡುತ್ತಿದ್ದಾರೆ, ಯಾವ ಪ್ರಕ್ರಿಯೆ ಮೇಲೆ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಎಸ್‌ಐಟಿ ತನಿಖೆ ಮುಕ್ತವಾಗಿ ನಡೆಯುತ್ತಿದ್ದು, ತನಿಖೆಗೆ ಅಡಚಣೆಯಾಗಬಾರದು ಎಂಬ ಉದ್ದೇಶಕ್ಕೆ ಮಂತ್ರಿಗಳು ಸ್ವಯಂ ಪ್ರೇರಿತರಾಗಿ ರಾಜೀ ನಾಮೆ ನೀಡಿದ್ದಾರೆ ಎಂದು ಹೇಳಿದರು.

ನಾವು ಸಹಾ ಕ್ರಾಸ್ ಚೆಕ್ ಮಾಡಿದ್ದು, ಸಚಿವರು ಯಾವುದೇ ಸಹಿ ಮಾಡಿಲ್ಲ, ಅವರ ಹಸ್ತಕ್ಷೇಪವಿಲ್ಲ. ಕಾನೂನು ಪ್ರಕಾರ ತನಿಖೆ ನಡೆಯುತ್ತಿದ್ದು, ಈ ಮಧ್ಯೆ ಇ.ಡಿ ದಾಳಿ ಮಾಡಿದೆ. ಮುಂದೆ ಏನು ಮಾಡುತ್ತಾರೆ ನೋಡೋಣ, ಅವರ ತನಿಖೆ ಮುಗಿಯಲಿ ನಂತರ ಮಾತನಾಡುತ್ತೇನೆ ಎಂದರು.

ನಿರ್ದಿಷ್ಟ ಮೊತ್ತಕ್ಕಿಂತ ಹೆಚ್ಚಿನ ಪ್ರಮಾಣದ ಅವ್ಯವಹಾರವಾದರೆ ಸಿಬಿಐ ತನಿಖೆ ಮಾಡುವ ಅಧಿಕಾರವಿದೆ. ಎಲ್ಲಾ ತನಿಖೆಗಳ ಮುಕ್ತಾಯದ ನಂತರ ತನಿಖೆಗಳು ಸರಿಯಾಗಿ ನಡೆದಿವೆಯೇ ಎಂಬ ಬಗ್ಗೆ ಇ.ಡಿ. ಪರಾಮರ್ಶೆ ಮಾಡಬಹುದಿತ್ತು ಎಂದರು.

# ಕೇಂದ್ರ-ರಾಜ್ಯಗಳ ಘರ್ಷಣೆ

**(3ನೇ ಪುಟದಿಂದ)** ಅವರು ಯಾವುದೇ ಕ್ಷಣದಲ್ಲಿ ಎಸ್‌ಐಟಿ ತನಿಖಾ ಸಂಸ್ಥೆ ಮೇಲೆ ದಾಳಿ ನಡೆಸುವ ಸಾಧ್ಯತೆ ಇದೆ. ಕಳೆದ 10 ದಿನಗಳಿಂದ ಹಗರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೀಡು ವಂತೆ ಇ.ಡಿ. ಅಧಿಕಾರಿಗಳು ಮಾಡಿದ ಮನವಿಗೆ ರಾಜ್ಯ ಪೊಲೀಸರು ಸ್ಪಂದಿಸಿಲ್ಲ. ದಾಖಲೆಗಳು ದೊರೆಯದೇ ಇ.ಡಿ., ವಿಚಾರಣೆಯನ್ನು ಪೂರ್ಣ ಪ್ರಮಾಣದಲ್ಲಿ ನಡೆಸಲೂ ಸಾಧ್ಯವಿಲ್ಲ ಹಾಗೂ ಆರೋಪಿಗಳನ್ನು ವಶಕ್ಕೆ ತೆಗೆದುಕೊಳ್ಳಲೂ ಆಗುತ್ತಿಲ್ಲ.

ಈ ಕಾರಣದಿಂದಲೇ ಇ.ಡಿ. ಅಧಿಕಾರಿಗಳು ಎಸ್‌ಐಟಿ ಕಚೇರಿ ಮೇಲೆ ದಾಳಿ ನಡೆಸಿ ದಾಖಲೆಗಳನ್ನು ವಶಪಡಿಸಿಕೊಳ್ಳಲು ಮುಂದಾಗಿದ್ದಾರೆ. ದಾಳಿ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳು ಅಡ್ಡಿ ಉಂಟು ಮಾಡಿದರೆ, ಅವರ ವಿರುದ್ಧವೇ ಪ್ರಕರಣ ದಾಖಲಿಸುವ ಸಾಧ್ಯತೆ ಇದೆ. ಈ ಹಿಂದೆ ಪಶ್ಚಿಮ ಬಂಗಾಳ ಹಾಗೂ ಕೇರಳದಲ್ಲೂ ಕೇಂದ್ರ ಮತ್ತು ಸ್ಥಳೀಯ ಪೊಲೀಸ್ ಅಧಿಕಾರಿಗಳ ನಡುವೆ ಇಂತಹದ್ದೇ ಘರ್ಷಣೆ ನಡೆದಿತ್ತು. ಬಿಜೆಪಿಯೇತರ ಆಡಳಿತ ಇರುವ ಕರ್ನಾಟಕದಲ್ಲೂ ಇಂತಹದೇ ಘರ್ಷಣೆ ಮುಂದುವರೆದಿದೆ.

# 2 ತಿಂಗಳು ಡೆಂಗ್ಯೂ ಹಾವಳಿ

**(3ನೇ ಪುಟದಿಂದ)** ಪಡೆಯುವ ಲ್ಯಾಬ್‌ಗಳ ವಿರುದ್ಧ ದೂರು ಕೇಳಿ ಬಂದರೆ, ಅವರ ಮೇಲೆ ಕ್ರಮ ಕೈಗೊಳ್ಳಲು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಡೆಂಗ್ಯೂ ನಿಯಂತ್ರಣ ಸಂಬಂಧ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ಹೈಕೋರ್ಟ್ ಕೇಳಿರುವ ಪ್ರಶ್ನೆಗೆ ರಾಜ್ಯ ಸರ್ಕಾರ ಸಮರ್ಪಕ ವರದಿ ನೀಡಲಿದೆ ಎಂದೂ ಅವರು ತಿಳಿಸಿದರು. ಡೆಂಗ್ಯೂ ರೋಗಿಗಳಿಗೆ ಅಗತ್ಯ ಇರುವ ಪ್ಲೇಟ್‌ಲೇಟ್‌ಗಳನ್ನು ಸರ್ಕಾರವೇ ಉಚಿತವಾಗಿ ನೀಡಲಿದೆ. ಪ್ಲೇಟ್‌ಲೇಟ್‌ಗಳು ಸಿಗುತ್ತಿಲ್ಲ ಎಂದು ಇದುವರೆಗೂ ಯಾವುದೇ ದೂರು ಬಂದಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮುಡಾ ಹಗರಣ ಮತ್ತು ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಗಳ ಕುರಿತು ನಮ್ಮಲ್ಲೂ ದಾಖಲೆಗಳಿವೆ. ವಿಧಾನಸಭೆಯಲ್ಲಿ ಮಾತನಾಡುತ್ತೇವೆ ಎಂದು ದಿನೇಶ್ ಗುಂಡೂರಾವ್ ಹೇಳಿದರು.

# ಸುಪ್ರೀಂ ಕೋರ್ಟ್‌ಗೆ ಇಬ್ಬರು ನ್ಯಾಯಮೂರ್ತಿಗಳಿಗೆ ಬಡ್ತಿ ನೀಡಲು ಶಿಫಾರಸ್ಸು

ನವದೆಹಲಿ, ಜು. 11 - ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಹೈಕೋರ್ಟ್ ನ್ಯಾಯಮೂರ್ತಿಗಳಾದ ಎನ್. ಕೋಟೀಶ್ವರ ಸಿಂಗ್ ಹಾಗೂ ಆರ್. ಮಹದೇವನ್ ಅವರಿಗೆ ಬಡ್ತಿ ನೀಡಲು ಸುಪ್ರೀಂ ಕೋರ್ಟ್‌ನ ಕೊಲೀಜಿಯಂ ಶಿಫಾರಸ್ಸು ಮಾಡಿದೆ.

ನ್ಯಾಯಮೂರ್ತಿ ಸಿಂಗ್ ಅವರು ಈಗ ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್‌ನಲ್ಲಿ ಮುಖ್ಯ ನ್ಯಾಯಮೂರ್ತಿ ಆಗಿದ್ದಾರೆ. ನ್ಯಾಯಮೂರ್ತಿ ಮಹದೇವನ್ ಅವರು ಮದ್ರಾಸ್ ಹೈಕೋರ್ಟ್‌ನಲ್ಲಿ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಆಗಿದ್ದಾರೆ.

# ಜಿಲ್ಲಾಸ್ಪತ್ರೆಗೆ 23 ಕೋಟಿ ರೂ.

**(3ನೇ ಪುಟದಿಂದ)** ಸೌಲಭ್ಯಗಳ ಕೊರತೆ ಇದೆ. ಇಲ್ಲಿ ಹೆಚ್ಚಿನ ಸಂಖ್ಯೆಯ ಮಹಿಳೆಯರು ದಾಖಲಾಗುತ್ತಿದ್ದಾರೆ. ಇಲ್ಲಿಯೂ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿದರು.

**ಕೋವಿಡ್ ವೇಳೆ ಹಿಂದಿನ ಜಿಲ್ಲಾಧಿಕಾರಿ ಭ್ರಷ್ಟಾಚಾರ :** ಕೊರೊನಾ ಸಮಯದಲ್ಲಿ ಒದಗಿಸಲಾದ ಯಾವುದೇ ಐ.ಸಿ.ಯು.ಗಳು ಕೆಲಸ ಮಾಡುತ್ತಿಲ್ಲ. ಕೊರೊನಾ ಸಮಯದಲ್ಲಿ ಡುಪ್ಲಿಕೇಟ್ ಬಿಲ್ ಮಾಡಿ ವಂಚಿಸಲಾಗಿದೆ. ಕೊರೊನಾ ಸಂದರ್ಭದಲ್ಲಿ ಶೇ.90ರಷ್ಟು ಭ್ರಷ್ಟಾಚಾರವಾಗಿದೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ಆರೋಪಿಸಿದರು.

ಜಿಲ್ಲಾಸ್ಪತ್ರೆಯಲ್ಲಿ ನರರೋಗ ತಜ್ಞರಿದ್ದಾರೆ. ಆದರೆ, ಎಂ.ಆರ್.ಐ. ಸ್ಕ್ಯಾನಿಂಗ್ ಯಂತ್ರವಿಲ್ಲ. ಚಿತ್ರದುರ್ಗದ ಆಸ್ಪತ್ರೆಯಲ್ಲಿ ತಜ್ಞ ವೈದ್ಯರೇ ಇಲ್ಲ. ಅಲ್ಲಿಗೆ ಎಂ.ಆರ್.ಐ. ಸ್ಕ್ಯಾನ್ ಯಂತ್ರ ಒದಗಿಸಲಾಗಿದೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ಹೇಳಿದರು. ಖಾಸಗಿಯಲ್ಲಿ ಸ್ಕ್ಯಾನಿಂಗ್ ಮಾಡಿಸಿಕೊಳ್ಳಬೇ ಕಾದರೆ 15 ಸಾವಿರ ರೂ.ಗಳ ಖರ್ಚಾಗುತ್ತದೆ. ಹೀಗಾಗಿ ದಾವಣಗೆರೆಯ ರೋಗಿಗಳು ಸ್ಕ್ಯಾನಿಂಗ್ ಮಾಡಿಸಿಕೊಳ್ಳಲು 5 ಸಾವಿರ ರೂ. ಖರ್ಚು ಮಾಡಿಕೊಂಡು ವಾಹನದಲ್ಲಿ ಚಿತ್ರದುರ್ಗಕ್ಕೆ ಹೋಗುವ ಪರಿಸ್ಥಿತಿ ಇದೆ. ಸ್ಕ್ಯಾನಿಂಗ್‌ಗಾಗಿ ಮೂರು ದಿನಗಳವರೆಗೆ ಕಾಯಬೇಕಿದೆ ಎಂದರು.

ಆಸ್ಪತ್ರೆಯ ಐ.ಸಿ.ಯು.ಗಳಲ್ಲಿ ಸಿಬ್ಬಂದಿಯ ತೀವ್ರ ಕೊರತೆ ಇದೆ. ಎಂಟು ಐ.ಸಿ.ಯು. ಬೆಡ್‌ಗಳಿಗೆ ಕೇವಲ ಒಬ್ಬರು ನರ್ಸ್ ಇದ್ದಾರೆ. ಐ.ಸಿ.ಯು. ರೋಗಿಗಳಿಗೆ ನಿರಂತರ ನಿಗಾ ಅವಶ್ಯಕತೆ ಇರುವುದರಿಂದ, ಪ್ರತಿ 8 ಬೆಡ್‌ಗಳಿಗೆ ಕನಿಷ್ಠ ಮೂವರು ನರ್ಸ್‌ಗಳ ಅಗತ್ಯವಿದೆ ಎಂದರು.

ಎಕ್ಸ್‌ರೇ ಯಂತ್ರಗಳು ಓಬಿರಾಯನ ಕಾಲದವಾಗಿವೆ. ಆಧುನಿಕ ಎಕ್ಸ್‌ರೇ ಯಂತ್ರಗಳ ಬೇಕಿದೆ. ಸೆಂಟ್ರಲ್ ಲ್ಯಾಬ್ ಅಗತ್ಯವಿದೆ. ಆಸ್ಪತ್ರೆಗೆ ಸುತ್ತಲಿನ 4-5 ಜಿಲ್ಲೆಗಳಿಂದ ರೋಗಿಗಳು ಬರುತ್ತಿದ್ದಾರೆ. ಆದರೆ, ಆಸ್ಪತ್ರೆಯೇ ದುಸ್ಥಿತಿಯಲ್ಲಿದೆ. ಕಟ್ಟಡ ಅವ್ಯವಸ್ಥೆಯ ಆಗರವಾಗಿದೆ. ಆಧುನಿಕ ಕಟ್ಟಡಕ್ಕೆ 50 ಕೋಟಿ ರೂ.ಗಳ ಅನುದಾನ ಬೇಕಿದೆ ಎಂದರು.

# ಆರ್ಕಿಟೆಕ್ಚರ್ ಅರ್ಹತಾ ಅಂಕ ಇಳಿಕೆ

**(1ನೇ ಪುಟದಿಂದ)** ಹೊಸದಾಗಿ ಅವಕಾಶ ಕಲ್ಪಿಸಲಾಗಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹೊಸದಾಗಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಜುಲೈ 15ರೊಳಗೆ ನಾಟಾ ಅಂಕಗಳ ವಿವರ ಮತ್ತು ಅರ್ಜಿ ಪ್ರತಿಯನ್ನು ಕೆಇಎಗೆ ಸಲ್ಲಿಸಬೇಕು. ಜುಲೈ 8ರೊಳಗೆ ನಾಟಾ ಅರ್ಹತೆ ಪಡೆದವರು ಕೂಡ ಈ ದಿನಾಂಕದೊಳಗೆ ಅಂಕಗಳ ಮಾಹಿತಿಯನ್ನು ನೀಡಬೇಕು ಎಂದು ಅವರು ವಿವರಿಸಿದ್ದಾರೆ.

# 11 ಅಧಿಕಾರಿಗಳು, ಇಂಜಿನಿಯರ್‌ಗಳ ಮೇಲೆ ಲೋಕಾಯುಕ್ತ ದಾಳಿ

ಬೆಂಗಳೂರು, ಜು. 11- ಅಕ್ರಮವಾಗಿ ಹಣ ಗಳಿಸಿದ ಆರೋಪಗಳಿಗೆ ಸಂಬಂಧಿಸಿದಂತೆ 11 ಸರ್ಕಾರಿ ಅಧಿಕಾರಿಗಳು ಹಾಗೂ ಇಂಜಿನಿಯರ್‌ಗಳ ವಿರುದ್ಧ ಲೋಕಾಯುಕ್ತರು ದಾಳಿ ನಡೆಸಿದ್ದಾರೆ.

9 ಜಿಲ್ಲೆಗಳಲ್ಲಿ ಸುಮಾರು 100 ಅಧಿಕಾರಿಗಳು ದಾಳಿಯಲ್ಲಿ ಭಾಗಿಯಾಗಿದ್ದರು. ಒಟ್ಟು 56 ತಾಣಗಳ ಮೇಲೆ ದಾಳಿ ನಡೆಸಲಾಗಿದೆ.

# ಡೆಂಘೀ ನಿಯಂತ್ರಣಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು

ಹರಪನಹಳ್ಳಿ, ಜು.11- ತಾಲ್ಲೂಕಿನಲ್ಲಿ ಡೆಂಘೀ ನಿಯಂತ್ರಣಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೊಸಂಬೆ, ಆರೋಗ್ಯ ಸಿಬ್ಬಂದಿಗೆ ಸೂಚನೆ ನೀಡಿದರು.



ಹರಪನಹಳ್ಳಿಯ ಆಸ್ಪತ್ರೆಗಳಿಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೊಸಂಬೆ ಭೇಟಿ, ಪರಿಶೀಲನೆ

ಪಟ್ಟಣದ ಸಾರ್ವಜನಿಕ ಆಸ್ಪತ್ರೆ, ಆಯುಷ್ ಡಯಾಗ್ನೋ ಸೆಂಟರ್ ಹಾಗೂ ಮಹೇಶ ನರ್ಸಿಂಗ್ ಹೋಂ, ಆಸ್ಪತ್ರೆಗಳಿಗೆ ಭೇಟಿ ನೀಡಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಹಿಂದಿಗಿಂತಲೂ ಚೇತರಿಕೆ ಕಂಡಿದ್ದು, ಅಭಿವೃದ್ಧಿ ಕಾರ್ಯ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲ್ಲೂಕಿನಲ್ಲಿ 5 ಡೆಂಘೀ ಶಂಕಿತ ಪ್ರಕರಣಗಳು ವರದಿಯಾಗಿದ್ದು, ಈ ಪೈಕಿ ಇಬ್ಬರಿಗೆ ಡೆಂಘೀ ಇರುವುದು ದೃಢವಾಗಿದೆ. ಆದ್ದರಿಂದ ವಸತಿ ಶಾಲೆ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ವೈದ್ಯರು ತಂಡ ರಚನೆ ಮಾಡಿಕೊಂಡು, ಭೇಟಿ ನೀಡಿ ತಪಾಸಣೆ ನಡೆಸಿ, ಔಷಧೋಪಚಾರ ಮಾಡುವಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಹೇಳಿದರು.

**ಕ್ರಮಕ್ಕೆ ಸೂಚನೆ:** ಪಟ್ಟಣದ ಮಹೇಶ ನರ್ಸಿಂಗ್‌ಹೋಂಹಾಗೂಆಯುಷ್‌ಡಯಾಗ್ನೋ ಸೆಂಟರ್‌ಗೆ ಭೇಟಿ ನೀಡಿ ಪರಿಶೀಲಿಸಿದಾಗ ಕೆಪಿಎಂಇ ಕಾಯ್ದೆಯ ನಿಯಮ ಉಲ್ಲಂಘನೆ ಕಂಡು ಬಂದ ಹಿನ್ನೆಲೆಯಲ್ಲಿ ಎರಡೂ ಆಸ್ಪತ್ರೆಯ ಸ್ಕ್ಯಾನಿಂಗ್ ಸೆಂಟರ್‌ಗಳನ್ನು ಸೀಜ್ ಮಾಡಲು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಹಾಲಸ್ವಾಮಿ ಅವರಿಗೆ ಸೂಚಿಸಿದ್ದೇನೆ ಎಂದು ತಿಳಿಸಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಖಾಸಗಿ ಆಸ್ಪತ್ರೆಗೆ ಭೇಟಿ ನೀಡದೇ ನಿರ್ಲಕ್ಷ್ಯ ವಹಿಸಿರುವ ಕಾರಣ ಅವರಿಗೂ ಕೂಡ ನೋಟಿಸ್ ನೀಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಗರ್ಭಿಣಿ, ಪ್ರಸೂತಿ ಭ್ರೂಣ ಲಿಂಗ ಪತ್ತೆ ವಿಷಯ ನಿರ್ವಾಹಕ ಧರ್ಮನ ಗೌಡ, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಹಾಲ ಸ್ವಾಮಿ, ಸಾರ್ವಜನಿಕ ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಶಂಕರನಾಯ್ಕ್, ಸಹಾಯಕ ಆಡಳಿತಾಧಿಕಾರಿ ವೆಂಕಟೇಶ್ ಬಾಗಲರ್, ಮಕ್ಕಳ ತಜ್ಞ ದತ್ತಾತ್ರೇಯ ಪಿಸೆ ಮತ್ತು ಇತರರು ಇದ್ದರು.

# ನಟಿ, ನಿರೂಪಕಿ ಅಪರ್ಣಾ ನಿಧನ

**(1ನೇ ಪುಟದಿಂದ)** ಚಿತ್ರಗಳಲ್ಲೂ ಅಪರ್ಣಾ ನಟಿಸಿದ್ದರು.

ಬೆಂಗಳೂರಿನ ಮೆಟ್ರೋದಲ್ಲಿ ಪ್ರಯಾಣಿಸುವವರಿಗೆ ಇವರ ಧ್ವನಿ ಚಿರಪರಿಚಿತವಾಗಿದ್ದು, ಬೆಂಗಳೂರಿನ ದೂರದರ್ಶನದಲ್ಲಿ ನಿರೂಪಕಿಯಾಗಿ, ಆಕಾಶವಾಣಿಯಲ್ಲಿ ನಿರೂಪಕಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಅಪರ್ಣಾ, ಕಿರುತೆರೆಯಲ್ಲಿ 'ಮೂಡಲಮನೆ', 'ಮುಕ್ತ' ಮುಂತಾದ ಧಾರಾವಾಹಿಗಳಲ್ಲಿ ಅಭಿನಯಿಸಿದ್ದ ಅಪರ್ಣಾ, 2013 ರಲ್ಲಿ ಬಿಗ್‌ಬಾಸ್ ಕನ್ನಡದ ಮೊದಲ ಸೀಸನ್‌ನಲ್ಲಿ ಭಾಗವಹಿಸಿದ್ದರು.

2015 ರಲ್ಲಿ ಸೃಜನ್ ಲೋಕೇಶ್ ನೇತೃತ್ವದಲ್ಲಿ ಆರಂಭವಾದ 'ಮಜಾ ಟಾಕೀಸ್' ಕಾರ್ಯಕ್ರಮದಲ್ಲಿ ವರಲಕ್ಷ್ಮಿ ಪಾತ್ರ ಮಾಡಿ ಕನ್ನಡ ಕಲಾಪ್ರಿಯರ ಮನಗೆದ್ದಿದ್ದರು.

'ಅಚ್ಚ ಕನ್ನಡದ ನಿರೂಪಕಿ' ಎಂದೇ ಹೆಸರಾಗಿದ್ದ ಅಪರ್ಣಾ ಅವರು, ಸರ್ಕಾರಿ ಕಾರ್ಯಕ್ರಮಗಳಲ್ಲಿ ನಿರೂಪಕಿಯಾಗಿದ್ದರು.

ಅಪರ್ಣಾ ಅವರ ನಿಧನ ಸುದ್ದಿ ಕೇಳಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್, ಸಚಿವ ದಿನೇಶ್ ಗುಂಡೂರಾವ್, ನಟ - ನಿರ್ದೇಶಕ ರಿಷಬ್ ಶೆಟ್ಟಿ ಮತ್ತಿತರರ ಗಣ್ಯರು ಸಂತಾಪ ಸೂಚಿಸಿದ್ದಾರೆ.

# ಪೋಷಕರು, ಅತ್ತೆ - ಮಾವಂದಿರ ಜೊತೆಗಿರಲು ವಿಶೇಷ ರಜೆ

ಗುವಾಹತಿ, ಜು. 11 - ಸರ್ಕಾರಿ ಉದ್ಯೋಗಿಗಳು ತಮ್ಮ ಪೋಷಕರು ಇಲ್ಲವೇ ಅತ್ತೆ ಮಾವಂದಿರ ಬಳಿ ಸಮಯ ಕಳೆಯಲು ಅಸ್ಸಾಂ ಸರ್ಕಾರ ನವೆಂಬರ್‌ನಲ್ಲಿ ಎರಡು ದಿನಗಳ ವಿಶೇಷ ರಜೆ ಪ್ರಕಟಿಸಿದೆ.

ಈ ವಿಶೇಷ ರಜೆಯನ್ನು ವೈಯಕ್ತಿಕ ಸಂಭ್ರಮಕ್ಕೆ ಬಳಸಿಕೊಳ್ಳುವಂತಿಲ್ಲ.

ಪೋಷಕರು ಇಲ್ಲವೇ ಅತ್ತೆ - ಮಾವಂದಿರು ಇರದ ಉದ್ಯೋಗಿಗಳು ಈ ರಜೆಗೆ ಅರ್ಹರಲ್ಲ ಎಂದು ತಿಳಿಸಲಾಗಿದೆ.

ಹಿರಿಯರಾದ ಪೋಷಕರು ಇಲ್ಲವೇ ಅತ್ತೆ-ಮಾವಂದಿರ ಜೊತೆ ಸಮಯ ಕಳೆಯಲು ಹಾಗೂ ಅವರ ಕಾಳಜಿ ವಹಿಸಲು ಮಾತ್ರ ಈ ರಜೆ ಬಳಸಿಕೊಳ್ಳಬೇಕು ಎಂದು ತಿಳಿಸಲಾಗಿದೆ.


**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ 12x18 ಮೀಟರ್ (40X60) ದಕ್ಷಿಣ
100 ಅಡಿ ರಸ್ತೆಯ ಹಿಂಭಾಗದ 40 ಅಡಿ ರಸ್ತೆಗೆ
ಓನರ್ : 96633 35235
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ ಟೀಂ ಅಕಾಡೆಮಿ ಕಾಲೇಜ್ ಹತ್ತಿರ 30x40 ಪೂರ್ವ, 30x50 ಪೂರ್ವ, 30x40 ಪಶ್ಚಿಮ, 30x60 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟು ಮಾರಾಟಕ್ಕೆ ಇದೆ**
ಶಿವಮೊಗ್ಗ ಜಿಲ್ಲಾ ಆಯನೂರಿನಿಂದ 3 ಕಿ.ಮೀ. ಮುಂದೆ ರಿಪೇನ್‌ಪೇಟೆ, ಮೇನ್ ರೋಡ್ ಪಕ್ಕ, 5000 ಅಡಿ ಜಾಗ ಮಾರಾಟಕ್ಕೆ ಇದೆ.
63642 27321

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ನಗರ ಸಮೀಪದ ಎಲ್ಲೋ ಬೆಲ್ಟ್ ಜೋನಿನಲ್ಲಿ 9 ಎಕರೆ ಪಾಮಾಯಿಲ್ ತೋಟ, ಬೇಕಾದವರು ಸಂಪರ್ಕಿಸಿ :
99863 61250

**Property Hub**
• EC
• E-swathu
• Building Licence
• Khatha Change
96118 66449

**ಕೆಲಸಕ್ಕೆ ಬೇಕಾಗಿದ್ದಾರೆ**
ಗೋಡೌನ್‌ನಲ್ಲಿ ಲೋಡ್ ಅನ್ ಲೋಡ್ ಮಾಡಲು ಹುಡುಗರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
94817 74321

**ಎಕ್ಸ್‌ಚೇಂಜ್ ಆಫರ್**
ನಮ್ಮಲ್ಲಿ ಎಲ್ಲಾ ತರಹದ ಸೋಫಾ, ಕುಷನ್, ಸೊಳ್ಳೆ ಮೆಷ್, ಸ್ಪಂಜ್ ಬೆಡ್ ಸಿಗುತ್ತದೆ. ವುಡ್ ಪಾಲೀಶ್ ಮಾಡಲಾಗುವುದು ಹಾಗೂ ರಿಪೇರಿ ಸಹ ಮಾಡುತ್ತೇವೆ.
79750 23609

**ಮನೆ ಮಾರಾಟಕ್ಕಿದೆ**
ಶಿರಮಗೊಂಡನಹಳ್ಳಿಯಲ್ಲಿ ಬಾಡಿಗೆ ಬರುವಂತಹ ಮನೆ, ಹದಡಿ ಮುಖ್ಯ ರಸ್ತೆಯಲ್ಲಿ 30x90 ರಲ್ಲಿ 2 ಮಳಿಗೆ, 2 ಬೆಡ್ ರೂಂವುಳ್ಳ 2 ಮನೆಗಳು, 1 ಬೆಡ್ ರೂಂವುಳ್ಳ 3 ಮನೆಗಳು ಇವೆ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಕ್ರೆಡಿಟ್ ಕೋ-ಆಪ್ ಸೊಸೈಟಿಗೆ ಬೇಕಾಗಿದ್ದಾರೆ**
ಕಾರ್ಯದರ್ಶಿ - B. Com - 1
ಅಕೌಂಟೆಂಟ್ - B.A of B. Com - 1
ಸಹಾಯಕರು - PUC - 1
ಮಹಿಳೆಯರಿಗೆ ಹೆಚ್ಚಿನ ಆದ್ಯತೆ ಸಂಪರ್ಕಿಸಿ :
88674 95285

**ಕಾಲೇಜ್‌ಗಾಗಿ ಲೀಜ್‌ಗೆ ಕಟ್ಟಡ ಬೇಕಾಗಿದೆ**
ನಗರದ ಹೊರಗೆ ಅಥವಾ ಒಳಗೆ ಲೀಸ್‌ಗೆ ಕಟ್ಟಡ ಬಾಡಿಗೆಗೆ ಬೇಕಾಗಿದೆ.
9535610817

**ಬೇಕಾಗಿದ್ದಾರೆ**
ರಿಸೆಪ್ಷನಿಸ್ಟ್ ಹಾಗೂ ಡ್ರೈವರ್ ಬೇಕಾಗಿದ್ದಾರೆ
96630 45888

**ಮನೆಗಳು ಬಾಡಿಗೆಗೆ / ಲೀಸ್‌ಗಿದೆ**
ಡಬಲ್ ಬೆಡ್ ರೂಂ ಹಾಗೂ ಸಿಂಗಲ್ ಬೆಡ್ ರೂಂ ಸುಸಜ್ಜಿತ 2ನೇ ಮಹಡಿ ಮನೆಗಳು ಶ್ರೀನಿವಾಸ ನಗರ, 4ನೇ ಕ್ರಾಸ್, ಹದಡಿ ರಸ್ತೆ, ದಾವಣಗೆರೆ ಇಲ್ಲಿ ಬಾಡಿಗೆಗೆ / ಲೀಸ್‌ಗಿದೆ. ಸಂಪರ್ಕಿಸಿ :
99723 42941, 81230 36901

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಕೆ. ಜಿ. ಪಿ. ಬಂಗಾರದ ಅಂಗಡಿಯಲ್ಲಿ ಸೇಲ್ಸ್ ಬಾಯ್ಸ್, ಸೇಲ್ಸ್ ಗರ್ಲ್ಸ್, ಆಫೀಸ್ ರೆಸಿಪಿಯೇಷನ್ಸ್ ಬೇಕಾಗಿದ್ದಾರೆ. ವೇತನ 15 ಸಾವಿರದಿಂದ 25 ಸಾವಿರ. ಮೊದಲು ಬಂದವರಿಗೆ ಆದ್ಯತೆ
90191 69123

**ಸೈಟುಗಳು ಮಾರಾಟಕ್ಕಿವೆ**
ಹರಿಹರದ ಅಮರಾವತಿ ಹೌಸಿಂಗ್ ಕಾಲೋನಿ ಮತ್ತು ಕೆ.ಹೆಚ್.ಬಿ. ಪಕ್ಕದಲ್ಲಿ ಅಳತೆ 30x40 ಪೂ-ಪ ದಿಕ್ಕಿನ 4 ಸೈಟುಗಳು ದೂಡಾ ಅಂತಿಮ ಅನುಮೋದನೆ. ನಗರ ಸಭೆ ಡೋ. ನಂ. ಬ್ಯಾಂಕ್ ಸಾಲ ಸೌಲಭ್ಯವಿರುವ ನೇರ ಮಾಲೀಕರಿಂದ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
98809 33630

**WANTED**
Banking Sector Job Openings
Male and Female
Qualification : Any Degree.
90715 55081
Interview Time - 11AM

**ಶಿಕ್ಷಕ/ ಶಿಕ್ಷಕಿಯರು ಬೇಕಾಗಿದ್ದಾರೆ**
ನಿಸರ್ಗ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆ
ಎಸ್‌ಓಜಿ ಬಡಾವಣೆ, ದಾವಣಗೆರೆ.
1) D.Ed/ BA/B.Com/B.Sc - 01
2) B.Sc B.Ed/ BA B.Ed - 01
ಸಂಪರ್ಕಿಸಿ:
87927 02690, 99862 26454

**ನಿಮಗೆ ಮಂಡಿನೋವು ಇದೆಯೇ? ಇಲ್ಲಿದೆ ಸಹಜ ಪರಿಹಾರ**
ಸಂಪರ್ಕಿಸಿ
ಪುನಃಚೇತನ ಹೆಲ್ತ್ ಕೇರ್
7ನೇ ಕ್ರಾಸ್, 8ನೇ ಮೇನ್, ಪಿ.ಜೆ.ಬಡಾವಣೆ, ದಾವಣಗೆರೆ.
ಮೊ : 99169 33905

**ERA GROUP CAMPANIES CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು.
Qualification : SSLC to Degree
7000K to 9000K+ Incentives.
ಸ್ಥಳ : KR Market Davanagere.
95350 51589, 78670 75786

**15x30 ಮಳಿಗೆ ಬಾಡಿಗೆಗೆ ಇದೆ**
ದೋಸೆ ಹೋಟೆಲ್ ನಡೆಸುವಂತಹ ಸಾಮಾನುಗಳು ಮಾರಾಟಕ್ಕಿವೆ.
ಹಳೇ ಆರ್.ಟಿ.ಓ ಹತ್ತಿರ, ಬಿಐಇಟಿ ರೋಡ್.
99642 62725

**ಬಾಡಿಗೆ / ಲೀಸ್‌ಗೆ**
ಡಬಲ್ ರೂಮ್‌ನ ಮನೆ ಸಿಗುತ್ತದೆ. ಅಶೋಕ ನಗರ ಕೊಂಡಜ್ಜಿ ರಸ್ತೆ, ದಾವಣಗೆರೆ. ಸಂಪರ್ಕಿಸಿ :
95356 10817

**WANTED**
PATIL AGENCY
* Tally Operator - 01
* Sales Men - 01
9060660949, 9880328444

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276


**ಪಟ್ಟಣ ಪಂಚಾಯಿತಿ ಕಾರ್ಯಾಲಯ, ಜಗಳೂರು–577528 (ದಾವಣಗೆರೆ ಜಿಲ್ಲೆ)**

Ph: 08196 227343 ka.jagalur.tp@gmail.com

ನಂ.ಪ.ಪಂ.ಜಗ.ಶೇ.5%/ಸಿಆರ್/03/2022–23
ದಿನಾಂಕ:06.07.2024

**ದರಪಟ್ಟಿ ಪ್ರಕಟಣೆ**

2022–23 ಸಾಲಿನ ಎಸ್.ಎಫ್.ಸಿ ಯೋಜನೆಯ ಶೇ.5% ರ ಯೋಜನೆಯಡಿ ಈ ಕೆಳಕಂಡ ಪರಿಕರಗಳನ್ನು ಪೂರೈಸಲು ದರಪಟ್ಟಿಯನ್ನು ಆಹ್ವಾನಿಸಲಾಗಿದ್ದು. ಆಸಕ್ತಿಯುಳ್ಳ ಅಧಿಕೃತ ಸರಬರಾಜುದಾರರಿಂದ ದಿನಾಂಕ:15–07–2024 ರ ದಿನಾಂಕದೊಳಗೆ ಈ ಕಛೇರಿಗೆ ಸೀಲ್ ಮಾಡಿದ ಲಕೋಟೆಯಲ್ಲಿ ತಮ್ಮ ದರಪಟ್ಟಿಯನ್ನು ಸಲ್ಲಿಸಲು ತಿಳಿಸಿದೆ. (ತೆರಿಗೆ ಸಹಿತ) ತಡವಾಗಿ ಬಂದ ದರಪಟ್ಟಿಯನ್ನು ಪರಿಗಣಿಸಲಾಗುವುದಿಲ್ಲ. ಸಾದನ ಸಲಕರಣೆಗಳು:– (1) ಕಂಪ್ಯೂಟರ್ (All In One PC, 8GB Ram, 500 GB Hard Disk, 21" Monitor, Intel Processor I-5, Key Bord & Mouse) ಪರಿಮಾಣ:–1 (2) ಪ್ರಿಂಟರ್ (Multi function with wifi , block and white ) ಪರಿಮಾಣ:–1

ವಾಸಾಇ/ದಾವಣಗೆರೆ/135/ಕೆಎಸ್‌ಎಂಸಿಎ/2024–25

ಸಹಿ/–ಮುಖ್ಯಾಧಿಕಾರಿ,
ಪಟ್ಟಣ ಪಂಚಾಯಿತಿ, ಜಗಳೂರು.


**ಮನೆ ಬಾಡಿಗೆಗೆ ಇದೆ**
ಆಂಜನೇಯ ಬಡಾವಣೆ, ಬಾಪೂಜಿಯವರ ಉದಯಗಿರಿ ಮತ್ತು ಚಂದ್ರಗಿರಿ ಬಿಲ್ಡಿಂಗ್ ಲೈನ್ ನಲ್ಲಿರುವ ಡೋ.ನಂ. 7871259 ಗ್ರೌಂಡ್ ಫ್ಲೋರ್, ಮೂರು ಬೆಡ್ ರೂಮ್ ಮನೆ ಬಾಡಿಗೆಗೆ ಇದೆ. ಬೋರ್ ವೆಲ್ ಹಾಗೂ ಕಾರ್ಪೊರೇಷನ್ ನೀರಿನ ವ್ಯವಸ್ಥೆ ಇದೆ. ಸಂಪರ್ಕಿಸಿ :
94488 55643, 99027 81163

**ಹಿಂದೂ ವಧು-ವರ ಅನ್ವೇಷಣೆ ಕೇಂದ್ರ**
ಮೊದಲನೆಯ ಮದುವೆ, ಎರಡನೇ ಮದುವೆ ವಧು-ವರಗಳಿಗೆ
ಸಂಪರ್ಕಿಸಿ :
86184 74929

**TUITIONS PCMB/CS**
5th Std to 10th Std
Science, Maths
ಸಮೃದ್ಧಿ ಅಕಾಡೆಮಿ
96202 62361

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಡಾಲರ್ಸ್‌ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಜನ್ಮಾಂತರ ಆತ್ಮ ಚಿಕಿತ್ಸೆ**
ಬಿಪಿ, ಶುಗರ್, ಮೈಗ್ರೇನ್, ಕ್ಯಾನ್ಸರ್, ಸ್ಟ್ರೋಕ್, ಡಿಪ್ರೆಶನ್, ಸ್ಕಿಜೋಫ್ರೇನಿಯಾ, ಮಾಟ, ಮಂತ್ರ, ಭೂತ ಪ್ರೇತಗಳ ಭಯ ಮುಂತಾದ ಅನೇಕ ಸಮಸ್ಯೆಗಳ ಮೂಲ ಹಿಂದಿನ ಜನ್ಮಗಳ ದೋಷಗಳಿಗೆ ರಾಮಬಾಣ ಚಿಕಿತ್ಸೆ
8073342011
(ವ್ಯಕ್ತಿ ಎಷ್ಟೇ ದೂರವಿದ್ದರೂ distance heeling ಮಾಡುತ್ತೇವೆ)

**ಬೇಕಾಗಿದ್ದಾರೆ**
ಆನಗೋಡು ಸಮೀಪ NH 48ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಆನಗೋಡು ಸುತ್ತ-ಮುತ್ತ ಇರುವ ಉತ್ಸಾಹಿ ಯುವಕರು ಬೇಕಾಗಿದ್ದಾರೆ. ಮತ್ತು ಬಂಕ್‌ನಲ್ಲಿ ಕ್ಲೀನಿಂಗ್ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ಸಂಪರ್ಕಿಸಿ.
90082 28222, 99001 42052

**ಸೈಟು ಮಾರಾಟಕ್ಕಿದೆ**
35x50 ಅಳತೆಯ ಸೈಟ್ ನಂ. 6, ಅಮರಾವತಿ ಬಡಾವಣೆ, ಆರ್ಕ್ ಗೇಟ್ ಹತ್ತಿರ, ಅಮರಾವತಿ ರಸ್ತೆ, 6ನೇ ಕ್ರಾಸ್, ಹರಿಹರ ಇಲ್ಲಿ ಸೈಟ್ ಮಾರಾಟಕ್ಕಿದೆ.
(1550/- ಚದುರ ಅಡಿ)
ಮಧ್ಯಾಹ್ನ 3 ಗಂಟೆಯ ನಂತರ ಸಂಪರ್ಕಿಸಿ.
98452 36274

**ಅಂಗಡಿ ಬಾಡಿಗೆಗಿದೆ**
ಕೆಎಸ್‌ಎಸ್ ಕಾಂಪ್ಲೆಕ್ಸ್, 403/5 ಶಾಪ್ 1, ಎಸ್‌ಎಸ್ ಹೈಟೆಕ್ ಆಸ್ಪತ್ರೆ, ಮೇನ್ ರೋಡ್, ಮಂಜುನಾಥೇಶ್ವರ ಬೆಣ್ಣೆ ದೋಸೆ ಹೋಟೆಲ್ ಪಕ್ಕ, ಜಯನಗರ "ಎ" ಬ್ಲಾಕ್, ದಾವಣಗೆರೆ-4.
72045 42910

**COMMERCIAL SPACE FOR RENT**
1st floor, 2600 sqft, Main Road facing, suitable for Financial Institutions/Bank (Strong room available)
Hadadi Main Road, Near Vidyarthi Bhavan Circle, DVG.
98440 15712
90604 04567

**ದಾವಣಗೆರೆ ಸುಪ್ರಸಿದ್ಧ ಲಾಡ್ಜ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ**
ರಿಸೆಪ್ಷನಿಸ್ಟ್ (ಪುರುಷ/ಮಹಿಳೆ)
ರೂಂ ಬಾಯ್
ಹೌಸ್ ಕೀಪಿಂಗ್
ಆಸಕ್ತರು ಈ ಕೆಳಗಿನ ವಾಟ್ಸಾಪ್ ಸಂಖ್ಯೆಗೆ ತಮ್ಮ ಬಯೋಡಾಟಾ ಹಾಗೂ ಭಾವಚಿತ್ರ ಕಳುಹಿಸಬಹುದು.
80737 75607

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**3BHK HOUSE FOR RENT**
At Uttam Badavane, 1st main, B ward No - 30, Avaragere Road. Contact :
99015 64535
94498 04535

**WANTED**
Sharp Photo Copier Machine Service Engineer .
Qualification - ITI
Office Boy - SSLC
M.No: 9448728866

**3 BHK HOUSE FOR RENT**
AT MCC A block, 6th main, 6th cross, Near Sukruthindra Mandira, DVG. (Vegetable Only)
9743599030, 9964614039

# ಪುರಿ ಜಗನ್ನಾಥ ರಥಯಾತ್ರೆ : ಭಕ್ತಾದಿಗಳಿಗೆ ಪ್ರಸಾದ ವಿತರಣೆ



ದಾವಣಗೆರೆ, ಜು. 10- ಈಚೆಗೆ ನಡೆದ ಪುರಿ ಶ್ರೀ ಜಗನ್ನಾಥ ರಥಯಾತ್ರೆ ಸಂದರ್ಭದಲ್ಲಿ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘ (ರಿ), ಎಸ್.ಕೆ.ಪಿ. ರಸ್ತೆ, ದಾವಣಗೆರೆ ಇವರಿಂದ ವಿದ್ಯಾರ್ಥಿ ಭವನ್ ಸರ್ಕಲ್ ನಲ್ಲಿ ಭಕ್ತಾದಿಗಳಿಗೆ ಪ್ರಸಾದ ವಿತರಿಸಲಾಯಿತು.

# ತೆರಿಗೆ ಹೆಸರಿನಲ್ಲಿ ಲೂಟಿಗಿಳಿದ ಮಹಾನಗರ ಪಾಲಿಕೆ ಆಡಳಿತ

ದಾವಣಗೆರೆ, ಜು. 11- ರಾಜ್ಯದ ಬೇರೆ ಬೇರೆ ಮಹಾನಗರ ಪಾಲಿಕೆಗಳ ಕರ ವಸೂಲಾತಿ ನಮೂನೆಯಲ್ಲಿ ಇಲ್ಲದ ಒಳಚರಂಡಿ ಹಾಗೂ ಘನತ್ಯಾಜ್ಯ ವಿಲೇವಾರಿ ಶುಲ್ಕವನ್ನು ನಗರದ ಆಸ್ತಿದಾರರಿಗೆ ಮನಬಂದಂತೆ ನಿಗದಿಪಡಿಸಿ, ತೆರಿಗೆ ಹೆಸರಿನಲ್ಲಿ ಲೂಟಿ ಮಾಡಲಾಗುತ್ತಿದೆ ಎಂದು ಮಹಾನಗರ ಪಾಲಿಕೆ ಮಾಜಿ ಸದಸ್ಯ ಶಿವನಹಳ್ಳಿ ರಮೇಶ್ ಆರೋಪಿಸಿದರು.



**ಪತ್ರಿಕಾ ಗೋಷ್ಠಿಯಲ್ಲಿ ಕಿಡಿಕಾರಿದ ಮಹಾನಗರ ಪಾಲಿಕೆ ಮಾಜಿ ಸದಸ್ಯ ಶಿವನಹಳ್ಳಿ ರಮೇಶ್**

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಲವು ವಾಣಿಜ್ಯ ಮಳಿಗೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇಲ್ಲದಿದ್ದರೂ ಸಹ ಒಳಚರಂಡಿ ಶುಲ್ಕದ ಹೆಸರಿನಲ್ಲಿ ಪ್ರತಿ ಮಳಿಗೆಗೆ 1200 ರೂ. ನಿಗದಿ ಮಾಡಲಾಗಿದೆ. ಅದೇ ರೀತಿ ಮಹಾನಗರ ಪಾಲಿಕೆ ಆಡಳಿತ ಘನತ್ಯಾಜ್ಯ ವಿಲೇವಾರಿ ವ್ಯವಸ್ಥೆಯನ್ನು ಹೊರಗುತ್ತಿಗೆ ನೀಡಿದ್ದರೂ, ವಾಣಿಜ್ಯ ಮಳಿಗೆ ಮಾಲೀಕರಿಂದ ಘನ ತ್ಯಾಜ್ಯ ವಿಲೇವಾರಿ ನೆಪದಲ್ಲಿ 1200 ರೂ. ವಸೂಲಿ ಮಾಡಲಾಗುತ್ತಿದೆ. ಒಟ್ಟು ಒಂದು ಮಳಿಗೆಯಿಂದ ಒಳಚರಂಡಿ ಮತ್ತು ಘನ ತ್ಯಾಜ್ಯ ವಿಲೇವಾರಿ ಶುಲ್ಕ ಸೇರಿ 2400 ರೂ. ಆಸ್ತಿ ತೆರಿಗೆ ಜೊತೆಗೆ ಹೆಚ್ಚುವರಿಯಾಗಿ ಕರ ನಿಗದಿಪಡಿಸಿ ವಸೂಲಾತಿ ಮಾಡಲಾಗಿದೆ ಎಂದು ದೂರಿದರು.

ಸ್ವಯಂಘೋಷಿತ ಆಸ್ತಿ ತೆರಿಗೆ ನಿಯಮಗಳನ್ನು ಉಲ್ಲಂಘಿಸಿ, ನಾಗರಿಕರಿಗೆ ಮಹಾನಗರ ಪಾಲಿಕೆ ಆಡಳಿತ ಅಸಂಬದ್ಧ, ಅಸಮರ್ಪಕ ಹಾಗೂ ಹಗಲು ದರೋಡೆ ತೆರಿಗೆಯನ್ನು ವಿಧಿಸಿದೆ ಎಂದು ಆರೋಪಿಸಿದರು.

ನಾಗರಿಕರಿಗೆ ಸೇರಿದ ಖಾಲಿ ನಿವೇಶನ, ವಸತಿ ನಿವೇಶನ, ವಾಣಿಜ್ಯ ಮಳಿಗೆಗಳ ಕರ ವಸೂಲಾತಿ ವಿಷಯದಲ್ಲಿ ಪಾಲಿಕೆ ಆಡಳಿತ ಸಂಪೂರ್ಣ ವಿಫಲವಾಗಿದೆ. ರಾಜ್ಯದ ಬೇರೆ ಬೇರೆ ನಗರಪಾಲಿಕೆಗಳಿಗೆ ಹೋಲಿಕೆ ಮಾಡಿ ನೋಡಿದರೆ ಶೇ. 50 ರಿಂದ 80 ರಷ್ಟು ಹೆಚ್ಚು ಕರ ವಸೂಲಿ ಮಾಡಲಾಗುತ್ತಿದೆ ಎಂದು ಹೇಳಿದರು.

ಈ ಕೂಡಲೇ ದಾವಣಗೆರೆ ಮಹಾನಗರ ಪಾಲಿಕೆ ಆಡಳಿತ ವಾರ್ಷಿಕ 2024-25 ರಲ್ಲಿ ಮಾಡಿರುವ ಮುಂಗಡ ಕರ ವಸೂಲಾತಿಯನ್ನು ನಿಲ್ಲಿಸಿ, ಹೆಚ್ಚುವರಿಯಾಗಿ ಪಡೆದ ಹಣವನ್ನು ಆಸ್ತಿದಾರರಿಗೆ ಕಟ್ಟಡದ ಹೆಚ್ಚುವರಿ ಹಣವನ್ನು ಹಿಂದಿರುಗಿಸಬೇಕು ಅಥವಾ ಮುಂಬರುವ ವಾರ್ಷಿಕ 2025-26 ನೇ ಸಾಲಿನ ವಾರ್ಷಿಕ ಆಸ್ತಿ ತೆರಿಗೆಯಲ್ಲಿ ಇದನ್ನು ಸರಿದೂಗಿಸಬೇಕು ಎಂದು ಬಿಜೆಪಿ ಆಗ್ರಹಿಸುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಮೇಯರ್ ಎಸ್.ಟಿ. ವೀರೇಶ್, ಬಿ.ಜಿ. ಅಜಯ್ ಕುಮಾರ್, ವಿಪಕ್ಷ ನಾಯಕ ಕೆ. ಪ್ರಸನ್ನಕುಮಾರ್, ಮಾಜಿ ಉಪ ಮೇಯರ್ ಗಾಯತ್ರಿಬಾಯಿ ಖಂಡೋಜಿ ರಾವ್, ಉಪ ಮೇಯರ್ ಯಶೋಧ ಹೆಗ್ಗಪ್ಪ, ಸದಸ್ಯರುಗಳಾದ ಆರ್. ಶಿವಾನಂದ್, ಕೆ.ಎಂ. ವೀರೇಶ್, ಶಿವಪ್ರಕಾಶ್, ವಕ್ತಾರ ಬಿ.ಎಂ. ಸತೀಶ್ ಕೊಳೇನಹಳ್ಳಿ, ಮುಖಂಡರಾದ ಸುರೇಶ್ ಗಂಡಗಾಳೆ, ಜಯಪ್ರಕಾಶ್ ಮತ್ತಿತರರಿದ್ದರು.

# ಎಸ್.ಎಸ್. ನಾರಾಯಣ ಆಸ್ಪತ್ರೆಯಲ್ಲಿ ಕ್ಯಾಥ್‌ಲ್ಯಾಬ್ ಉದ್ಘಾಟನೆ

ದಾವಣಗೆರೆ, ಜು. 11- ನಗರದ ಎಸ್.ಎಸ್. ನಾರಾಯಣ ಹೆಲ್ತ್ ಸೂಪರ್ ಸ್ಪೆಷಾಲಿಟಿ ಸೆಂಟರ್‌ನಲ್ಲಿ ನೂತನ ಕ್ಯಾಥ್‌ಲ್ಯಾಬ್ ಅನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಿದರು.



ಇದೇ ವೇಳೆ ಮಾತನಾಡಿದ ಅವರು, ದಾವಣಗೆರೆಯಲ್ಲಿ ಎಸ್.ಎಸ್. ನಾರಾಯಣ ಹೆಲ್ತ್ ಸೂಪರ್ ಸ್ಪೆಷಾಲಿಟಿ ಕೇಂದ್ರವನ್ನು ಪ್ರಾರಂಭಿಸಿರುವುದು ಉತ್ತಮ ಗುಣಮಟ್ಟದ ಆರೋಗ್ಯ ಸೇವೆಯನ್ನು ಎಲ್ಲರಿಗೂ ತಲುಪಿಸುವ ಧ್ಯೇಯದಲ್ಲಿ ಮಹತ್ವದ ಹೆಜ್ಜೆಯನ್ನು ಪ್ರತಿನಿಧಿಸುತ್ತದೆ ಎಂದು ಶ್ಲಾಘಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ನೂತನ ಕ್ಯಾಥ್‌ಲ್ಯಾಬ್ ಕಾರ್ಯವಿಧಾನದ ಬಗ್ಗೆ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಮಾಹಿತಿ ನೀಡಿದರು.

ಹೊಸ ಕ್ಯಾಥ್‌ಲ್ಯಾಬ್ ಅತ್ಯುನ್ನತ ಆರೈಕೆ ಮತ್ತು ಕನಿಷ್ಟ ರೇಡಿಯೇಷನ್ ಹೊಂದಿದೆ. ನಿಖರ ಮತ್ತು ಪರಿಣಾಮಕಾರಿಯಾಗಿ ಚಿಕಿತ್ಸೆ ನೀಡುವುದಲ್ಲದೇ, ಹೃದಯದ ತುರ್ತು ಚಿಕಿತ್ಸೆಯನ್ನು ತಕ್ಷಣ ನಿರ್ವಹಣೆ ಮಾಡುತ್ತದೆ ಎಂದರು.

ನಮ್ಮ ಆಸ್ಪತ್ರೆಯಲ್ಲಿ ಎರಡನೇ ಸುಧಾರಿತ ಕ್ಯಾಥ್‌ಲ್ಯಾಬ್ ಅನ್ನು ಅನಾವರಣಗೊಳಿಸಲು ನಾವು ಅತ್ಯಂತ ಸಂತೋಷಗೊಂಡಿದ್ದೇವೆ. ಈ ವಿಸ್ತರಣೆಯು ನಾವು ಸೇವೆ ಸಲ್ಲಿಸುತ್ತಿರುವ ಸಮುದಾಯಗಳಿಗೆ ಉತ್ತಮ ಗುಣಮಟ್ಟದ, ಸಮಗ್ರ ಹೃದಯ ಆರೈಕೆಯನ್ನು ತರುವ ನಮ್ಮ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಅತ್ಯಾಧುನಿಕ ತಂತ್ರಜ್ಞಾನ ಮತ್ತು ಹೆಸರಾಂತ ತಜ್ಞರ ತಂಡವನ್ನು ಒಂದೇ ಸೂರಿನಡಿ ನೀಡುವ ಮೂಲಕ, ದಾವಣಗೆರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ರೋಗಿಗಳಿಗೆ ತಡೆ ರಹಿತ ಮತ್ತು ಪರಿಣಾಮಕಾರಿ ಚಿಕಿತ್ಸಾ ನೀಡುವ ಗುರಿ ಹೊಂದಿರುವುದಾಗಿ ತಿಳಿಸಿದರು.

ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ದಾವಣಗೆರೆ ಜಿಲ್ಲೆ ಸೇರಿದಂತೆ ಸುತ್ತಮುತ್ತಲಿನ ಜನರ ಆರೋಗ್ಯದ ದೃಷ್ಟಿಯಿಂದ ದೂರದ ನಗರಗಳಿಗೆ ಹೆಚ್ಚಿನ ಚಿಕಿತ್ಸೆಗೆ ಹೋಗುವ ಬದಲು ಉತ್ತಮ ಹಾಗೂ ಅತ್ಯಾಧುನಿಕ ವಿಶ್ವ ದರ್ಜೆಯ ಆರೋಗ್ಯ ಸೇವೆಗಳು ನಮ್ಮಲ್ಲಿಯೇ ಸಿಗುವಂತಾಗಬೇಕು ಎಂಬುದು ನಮ್ಮ ಆಶಯ ಎಂದರು.

ನಾರಾಯಣ ಹೆಲ್ತ್‌ನ ನಿರ್ದೇಶಕ ಡಾ. ವಿಜಯಸಿಂಗ್ ಮಾತನಾಡಿ, ನೂತನ ಕ್ಯಾಥ್‌ಲ್ಯಾಬ್ ಸೌಲಭ್ಯವು ದಾವಣಗೆರೆ ಜನತೆಗೆ ಅತ್ಯಾಧುನಿಕ ಹೃದಯ ರೋಗ ಚಿಕಿತ್ಸೆ ನೀಡಲು ನಮ್ಮ ಸಮರ್ಪಣಾ ಮನೋಭಾವನೆಯನ್ನು ಖಚಿತಪಡಿಸುತ್ತದೆ ಎಂದರು.

ಹೃದಯ ರೋಗವು ರೋಗಿಗಳು ಮತ್ತು ಅವರ ಕುಟುಂಬಗಳಿಗೆ ಅಪಾರ ಹೊರೆಯಾಗಿದೆ. ಈ ನಿಟ್ಟಿನಲ್ಲಿ ನಾರಾಯಣ ಹೆಲ್ತ್ ಸಮೂಹವು ಆಧುನಿಕ ರೋಗ ನಿರ್ಣಯದ ಸಾಧನಗಳು ಮತ್ತು ಹೆಚ್ಚು ನುರಿತ ಸೂಪರ್ ಸ್ಪೆಷಾಲಿಟಿ ವೈದ್ಯರ ತಂಡದೊಂದಿಗೆ ನಾವು ಹೃದ್ರೋಗದ ಹೊರೆಯನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿದ್ದೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕರುಗಳಾದ ಕೆ.ಎಸ್. ಬಸವಂತಪ್ಪ, ಜಗಳೂರು ದೇವೇಂದ್ರಪ್ಪ, ಜಿಲ್ಲಾಧಿಕಾರಿ ಡಾ.ಜಿ.ಎಂ. ಗಂಗಾಧರಸ್ವಾಮಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಬಸವರಾಜ್, ಪಾಲಿಕೆ ಸದಸ್ಯರಾದ ಗಡಿಗುಡಾಳ್ ಮಂಜುನಾಥ, ಕೆ. ಚಮನ್ ಸಾಬ್, ಪಾಮೇನಹಳ್ಳಿ ನಾಗರಾಜ್, ಎಸ್.ಎಸ್. ನಾರಾಯಣ ಹೆಲ್ತ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಆಡಳಿತ ಮಂಡಳಿ ಸದಸ್ಯರು, ವೈದ್ಯರು, ಸಿಬ್ಬಂದಿ ಇದ್ದರು.

## ಎಪಿಎಂಸಿ ವರ್ತಕರಿಂದ ಮಳೆಗಾಗಿ ಪೂಜೆ



ದಾವಣಗೆರೆ, ಜು.11-ಮಳೆ ಮತ್ತು ಲೋಕಕಲ್ಯಾಣಾರ್ಥವಾಗಿ ನಗರದ ಎಪಿಎಂಸಿ ವರ್ತಕರ ಸ್ನೇಹ ಬಳಗದಿಂದ ತೀರ್ಥಹಳ್ಳಿ ತಾಲ್ಲೂಕಿನ ಶೃಂಗೇರಿ ಹತ್ತಿರದಲ್ಲಿರುವ ತೀರ್ಥ ಮತ್ತೂರು ಮಠದಲ್ಲಿ ಇಂದು ವಿಶೇಷ ಪೂಜೆ ಮತ್ತು ಜಪ, ಹೋಮ ನಡೆಸಲಾಯಿತು.

ವಾಸಕಿ ಟ್ರಸ್ಟ್ ಮುಖ್ಯಸ್ಥರೂ, ಬ್ರಹ್ಮಾವರ ಗುರುಗಳೂ ಆದ ವೇದಮೂರ್ತಿ ಗುರೂಜಿ ಮುಂದಾಳತ್ವದಲ್ಲಿ ಸುನಿಲ್ ಆಚಾರ್ ಮತ್ತು ಗಣೇಶ್ ಆಚಾರ್ ಸಮ್ಮುಖದಲ್ಲಿ ಈ ಪೂಜೆ, ಹೋಮ ನೆರವೇರಿದವು.

ಎಪಿಎಂಪಿ ವರ್ತಕರುಗಳಾದ ಕೊರಟಿಕೆರೆ ಶಿವಕುಮಾರ್, ಅಣಬೇರು ಮಲ್ಲಿಕಾರ್ಜುನ್, ರಾಮಗೊಂಡನಹಳ್ಳಿ ಜಯಣ್ಣ, ಬನಶಂಕರಿ ಟ್ರೇಡರ್ಸ್‌ನ ಶಂಕ್ರಣ್ಣ, ಪ್ರಭುದೇವ ಬೆಳವನೂರು, ಶಿವಕುಮಾರ್ ಬೆಳವನೂರು, ಕರೇಶಿವಪ್ಪ ಸಿದ್ದೇಶ್, ಆರ್.ಜಿ. ರುದ್ರೇಶ್, ಐಗೂರು ವಿಜಯಕುಮಾರ್ ಮತ್ತಿತರರು ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಪ್ರವೀಣ್ ಕ್ಯಾಪಿಟಲ್ ಶಾಖೆ ಉದ್ಘಾಟನೆ



ದಾವಣಗೆರೆ, ಜು. 11 - ಪ್ರವೀಣ್ ಕ್ಯಾಪಿಟಲ್ ಪ್ರೈವೇಟ್ ಲಿಮಿಟೆಡ್ ಇದರ ನೂತನ ಶಾಖೆ ನಿನ್ನೆ ಕಾರ್ಯಾರಂಭ ಮಾಡಿತು. ಅಮೋಘ ಜೆ. ರೈ ಸಿಇಒ, ಶ್ರೀವತ್ಸರಾಜ ಎಂ.ಜಿ. ಕೆಜಿಎಫ್, ರಾಘವೇಂದ್ರ ಬಿ.ಜಿ. ರೀಜಿನಲ್ ಮ್ಯಾನೇಜರ್ ಹಾಗೂ ಶಾಖಾ ವ್ಯವಸ್ಥಾಪಕ ಶ್ರೀಕಾಂತ್ ಬಾದ್ರಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಅಮೋಘ ಜೆ. ರೈ ಮಾತನಾಡಿದರು.

## ಇಇ ಉಮೇಶ್, ಎಇಇ ಪ್ರಭಾಕರ್ ಮನೆಗಳ ಮೇಲೆ ಲೋಕಾಯುಕ್ತ ದಾಳಿ

ದಾವಣಗೆರೆ, ಜು.11- ಕೆಪಿಟಿಸಿಇಎಲ್ ಇಇ ಡಿ.ಎಚ್. ಉಮೇಶ್, ಎಇಇ ಪ್ರಭಾಕರ್ ಮನೆಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಅಕ್ರಮ ಆಸ್ತಿ ಗಳಿಕೆ ಬಗ್ಗೆ ದೂರುದಾರರು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಒಟ್ಟು ಎಂಟು ಕಡೆ ದಾವಣಗೆರೆ ಲೋಕಾಯುಕ್ತ ಅಧೀಕ್ಷಕ ಎಂ.ಎಸ್. ಕೌಲಾಪುರೆ ನೇತೃತ್ವದಲ್ಲಿ ದಾಳಿ ನಡೆದಿದೆ.

ನಗರದಲ್ಲಿರುವ ಉಮೇಶ್ ಅವರ ಭವ್ಯ ಬಂಗಲೆ, ಶಿವಕುಮಾರಸ್ವಾಮಿ ಬಡಾವಣೆ ಎರಡನೇ ಹಂತದ ಲ್ಲಿರುವ ಮನೆ, ಲೋಕಾಯುಕ್ತ ಪಿಐ ಎಚ್‌ಎಸ್ ರಾಷ್ಟ್ರಪತಿ ಆವರಗೆರೆಯಲ್ಲಿರುವ ಹೊಸ ಮನೆ ಮೇಲೆ ದಾಳಿ ನಡೆಸಿ ದಾಖಲೆ ಪರಿಶೀಲನೆ ನಡೆಸಿದ್ದಾರೆ. ಬಳ್ಳಾರಿ ಲೋಕಾಯುಕ್ತ ಪಿಐ ಸಂಗಮೇಶ್ ನಗರದಲ್ಲಿರುವ ಕೆಐಎಡಿಬಿ ಉಗ್ರಾಣದ ಮೇಲೆ ದಾಳಿ ನಡೆಸಿದ್ದಾರೆ.

ದಾವಣಗೆರೆ ಬೆಸ್ಕಾಂ ವಿಜಿಲೆನ್ಸ್ ಅಧಿಕಾರಿ ಎಇಇ ಪ್ರಭಾಕರ್ ಮನೆ ಮೇಲೂ ದಾಳಿ ನಡೆಸಲಾಗಿದೆ. ದಾವಣಗೆರೆ ಡಿಎಸ್ಪಿ ಕಲಾವತಿ ಗದಗ ಪಿಐ ಪುರುಷೋತ್ತಮ ದಾವಣಗೆರೆ ಎಂಸಿಸಿ ಎ ಬ್ಲಾಕ್ ನ 13 ನೇ ಮೇನ್ ನಲ್ಲಿರುವ ವಾಸದ ಮನೆ, ಹಾವೇರಿ ಡಿಎಸ್ಪಿ ಬಿ.ಪಿ.ಚಂದ್ರಶೇಖರ್ ತರಳಬಾಳು ಬಡಾವಣೆಯಲ್ಲಿರುವ ಮಾವನ ಮನೆ ಬಳ್ಳಾರಿ ಲೋಕಾಯುಕ್ತ ಮಹಮ್ಮದ್ ರಫೀಕ್ ಬೆಸ್ಕಾಂ ವಿಜಿಲೆನ್ಸ್ ಕಚೇರಿ ಮೇಲೆ ದಾಳಿ ನಡೆಸಿದ್ದಾರೆ.

# ಜನಸಂಖ್ಯೆ ತಡೆದಿದ್ದಕ್ಕೆ ದುಪ್ಪಟ್ಟು ಹೊಡೆತ!

**ಅನುದಾನ ಕಡಿತ, ರಾಜಕೀಯ ಪ್ರಾತಿನಿಧ್ಯ ಕಡಿಮೆಯಾಗುವ ಅಪಾಯ : ಆರೋಗ್ಯ ಸಚಿವ ದಿನೇಶ್ ಗುಂಡೂರಾವ್**

ದಾವಣಗೆರೆ, ಜು. 11 - ಜನಸಂಖ್ಯಾ ಸ್ಫೋಟ ದೇಶದ ಬೆಳವಣಿಗೆಗೆ ಮಾರಕವಾಗಿದೆ. ಜನಸಂಖ್ಯಾ ಸ್ಫೋಟ ತಡೆಯಲು ಅಪಾರವಾಗಿ ಶ್ರಮಿಸಿದ ರಾಜ್ಯಗಳಿಗೆ ಪ್ರೋತ್ಸಾಹ ಸಿಗುವ ಬದಲು ಎರಡು ರೀತಿಯ ಹೊಡೆತಗಳು ಎದುರಾಗಿವೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ವಿಷಾದಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಆರೋಗ್ಯ ಸಂಘಗಳ ವತಿಯಿಂದ ನಗರದ ಬಿ.ಐ.ಇ.ಟಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ವಿಶ್ವ ಜನಸಂಖ್ಯಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜನಸಂಖ್ಯೆ ಬೆಳವಣಿಗೆಯನ್ನು ಸೂಚಿಸುವ ಒಟ್ಟು ಫಲವತ್ತತೆ ದರ (ಟಿ.ಎಫ್.ಆರ್.) ರಾಷ್ಟ್ರ ಮಟ್ಟದಲ್ಲಿ ಶೇ.2.2 ಇದೆ. ಆದರೆ, ರಾಜ್ಯದಲ್ಲಿ ಶೇ.1.6 ಆಗಿದೆ. ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳು ಜನಸಂಖ್ಯೆ ನಿಯಂತ್ರಣದಲ್ಲಿ ಅತಿ ಹೆಚ್ಚಿನ ಕೊಡುಗೆ ನೀಡಿವೆ ಎಂದವರು ಹೇಳಿದರು.

ಆದರೆ, ಈ ಸಾಧನೆಯ ಕಾರಣದಿಂದಾಗಿಯೇ ರಾಜ್ಯಕ್ಕೆ ಅನುದಾನ ಕಡಿಮೆಯಾಗಿದೆ. ಕೇಂದ್ರ ಸರ್ಕಾರ ಹೆಚ್ಚಿನ ಜನಸಂಖ್ಯೆಯುಳ್ಳ ರಾಜ್ಯಗಳಿಗೆ ಹೆಚ್ಚಿನ ಅನುದಾನ ನೀಡುತ್ತಿದೆ. ಕರ್ನಾಟಕದಲ್ಲಿ ಜನಸಂಖ್ಯೆ ಕಡಿಮೆಯಾಗಿರುವ ಕಾರಣ, ಅನುದಾನಕ್ಕಾಗಿ ಕೇಂದ್ರದ ಜೊತೆ ಘರ್ಷಣೆ ನಡೆಸುವ ಪರಿಸ್ಥಿತಿ ಬಂದಿದೆ. ಒಳ್ಳೆ ಕೆಲಸ ಮಾಡಿದವರಿಗೆ ಶಿಕ್ಷೆ ನೀಡಿದರೆ ಹೇಗೆ? ಎಂದು ಸಚಿವರು ಪ್ರಶ್ನಿಸಿದರು.

ಇದರ ಜೊತೆಗೆ ಲೋಕಸಭಾ ಕ್ಷೇತ್ರಗಳ ಪುನರ್ವಿಂಗಡಣೆ ನಡೆದರೆ ಲೋಕಸಭೆಯಲ್ಲಿ ರಾಜ್ಯ ಹೊಂದಿರುವ ಪ್ರಾತಿನಿಧ್ಯದ ಪ್ರಮಾಣ ಕಡಿಮೆಯಾಗುವ ಅಪಾಯವೂ ಇದೆ. ಪುನರ್ವಿಂಗಡಣೆಯಿಂದ ಉತ್ತರದ ರಾಜ್ಯಗಳಿಗೆ ರಾಜಕೀಯ ಶಕ್ತಿ ಹೆಚ್ಚಾದರೆ, ದಕ್ಷಿಣದ ರಾಜ್ಯಗಳಿಗೆ ಕಡಿಮೆಯಾಗಲಿದೆ. ಈ ಸಮಸ್ಯೆ ವಿರುದ್ಧ ವ್ಯವಸ್ಥಿತ ಹೋರಾಟ ನಡೆಸುವ ಅಗತ್ಯವಿದೆ ಎಂದವರು ಹೇಳಿದರು.

ಇಷ್ಟಾದರೂ, ಜನಸಂಖ್ಯೆ ನಿಯಂತ್ರಣ ತುರ್ತು ಅಗತ್ಯವಾಗಿದೆ. ಈಗಿನ ಪರಿಸ್ಥಿತಿಯಲ್ಲಿ 2050ರವರೆಗೂ ದೇಶದ ಜನಸಂಖ್ಯೆ ನಿರಂತರವಾಗಿ ಏರಿಕೆಯಾಗಲಿದೆ. ನಂತರವೇ ಇಳಿಮುಖವಾಗಲಿದೆ. ಅಪಾರ ಜನಸಂಖ್ಯೆಯಿಂದಾಗಿ ಪರಿಸರದ ಮೇಲೆ ಹೆಚ್ಚಿನ ಒತ್ತಡ ಬೀಳಲಿದೆ. ಹೀಗಾಗಿ ಜನಸಂಖ್ಯೆ ನಿಯಂತ್ರಣ ಮಹತ್ವದ್ದಾಗಿದೆ ಎಂದು ಸಚಿವರು ಹೇಳಿದರು.

# ವಿಶ್ವ ಜನಸಂಖ್ಯಾ ದಿನಾಚರಣೆ ಪ್ರಯುಕ್ತ ಸೈಕಲ್ ಜಾಥಾ



ದಾವಣಗೆರೆ, ಜು. 11- ವಿಶ್ವ ಜನಸಂಖ್ಯಾ ದಿನಾಚರಣೆ ಪ್ರಯುಕ್ತ ಜನಸಂಖ್ಯೆ ನಿಯಂತ್ರಣದ ಬಗ್ಗೆ ಸೈಕಲ್ ಜಾಥಾವನ್ನು ದಾವಣಗೆರೆ ನಗರದ ಜಿಲ್ಲಾಧಿಕಾರಿ ಗಂಗಾಧರ್ ಸ್ವಾಮಿ ಇವರ ನೇತೃತ್ವದಲ್ಲಿ ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸಲಾಯಿತು

ಈ ಸಂದರ್ಭದಲ್ಲಿ ದಾವಣಗೆರೆ ಬೈಸಿಕಲ್ ಕ್ಲಬ್‌ನ ಅಧ್ಯಕ್ಷ ಪ್ರಸಾದ್ ಅಣ್ಣ, ಕಾರ್ಯದರ್ಶಿ ಮಹೇಶ್ ಮತ್ತು ಸಂಘದ ಖಜಾಂಚಿ ನೇತ್ರ ತಜ್ಞ ಡಾ. ಸುರೇಶ್, ಸದಸ್ಯರಾದ ಹರೀಶ್, ನಂದೀಶ್, ಕಿರಣ್ ಬಾಳೆಹೊಲದ ಇತರರು ಪಾಲ್ಗೊಂಡು ಯಶಸ್ವಿಯಾಗಿ ಜಾಗೃತಿ ಮೂಡಿಸಿದರು.

## ನಗರದಲ್ಲಿ ಮೊಹರಂ ಉಪನ್ಯಾಸ

ದಾವಣಗೆರೆ, ಜು. 11 - ಚಂದ್ರದರ್ಶನದಿಂದ ಪ್ರಾರಂಭವಾಗಿರುವ ಮುಸ್ಲಿಂ ಬಾಂಧವರ ಹೊಸ ವರ್ಷದ ಸಂಕೇತವಾಗಿರುವ ಮೊಹರಂ ಹಬ್ಬದ 'ಯಾದೇ ಹುಸೇನ್' ಅಂಗವಾಗಿ ಕೆ.ಆರ್.ರಸ್ತೆಯಲ್ಲಿರುವ ನೂರಾನಿ ಆಟೋ ಚಾಲಕರ ಸಂಘದ ಆಶ್ರಯದಲ್ಲಿ 10 ದಿನಗಳವರೆಗೆ ಮೊಹರಂ ತಖರೀರ್ (ಉಪನ್ಯಾಸ) ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮೌಲಾನಾ ಮುಫ್ತಿ ಮಹಮ್ಮದ್ ಆಹಮದ್ ಅಶ್ರಫ್ ಅವರು ಉಪನ್ಯಾಸ ನೀಡುವರು. ಅಲ್ಹಾಜ್ ಅಲ್ಲಾವಲ್ಲಿ ಇನಾಯತ್ ಉಲ್ಲಾ ಖಾನ್ ಅವರು ಅಧ್ಯಕ್ಷತೆ ವಹಿಸುವರು. ಪ್ರತಿದಿನ ರಾತ್ರಿ 9 ಗಂಟೆಗೆ ಪ್ರಾರಂಭವಾಗುವ ಈ ಕಾರ್ಯಕ್ರಮದಲ್ಲಿ ನಗರದ ಉಲೇಮಾಗಳು ಪಾಲ್ಗೊಳ್ಳುವರು. ಮಹಿಳೆಯರಿಗೆ ವಿಶೇಷ ಆಸನದ ವ್ಯವಸ್ಥೆ ಮಾಡಲಾಗಿದೆ ಎಂದು ಅಲ್ಪತಾ ಅಬ್ದುಲ್ ರಹಮಾನ್ ತಿಳಿಸಿದ್ದಾರೆ.

## ನಿಟುವಳ್ಳಿಯಲ್ಲಿ ಇಂದು ಶಿವರಾಜ್ ಕುಮಾರ್ ಹುಟ್ಟು ಹಬ್ಬ



ದಾವಣಗೆರೆ, ಜು. 11- ಅಖಿಲ ಕರ್ನಾಟಕ ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘಗಳ ಒಕ್ಕೂಟ, ಡಾ. ಶಿವರಾಜ್ ಕುಮಾರ್ ಅಭಿಮಾನಿಗಳ ಸಂಘ, ರಾಜರತ್ನ ಪುನೀತ್ ರಾಜ್‌ಕುಮಾರ್ ಅಭಿಮಾನಿಗಳ ಸಂಘ, ಅಖಿಲ ಕರ್ನಾಟಕ ಯುವರಾಜ್‌ಕುಮಾರ್ ಅಭಿಮಾನಿಗಳ ಸಂಘ ಇವರುಗಳ ಸಂಯುಕ್ತಾಶ್ರಯದಲ್ಲಿ ನಾಳೆ ದಿನಾಂಕ 12 ರ ಶುಕ್ರವಾರ ಸಂಜೆ 6.30 ಕ್ಕೆ ನಿಟುವಳ್ಳಿ ಮಣಿಕಂಠ ವೃತ್ತದಲ್ಲಿ ಹ್ಯಾಟ್ರಿಕ್ ಹೀರೋ ಡಾ. ಶಿವರಾಜ್ ಕುಮಾರ್ ಜನ್ಮ ದಿನ ಆಚರಿಸಲಾಗುವುದು ಎಂದು ಸಂಘಟನೆಗಳ ಜಿಲ್ಲಾಧ್ಯಕ್ಷ ಬಿ. ಯೋಗೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮವನ್ನು ಉದ್ಘಾಟಿಸುವರು. ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕಾಂಗ್ರೆಸ್ ಮುಖಂಡರಾದ ಆರ್.ಎಸ್. ಶೇಖರಪ್ಪ, ದಿನೇಶ್ ಕೆ. ಶೆಟ್ಟಿ, ಶಾಸಕ ಬಸವರಾಜ್ ಶಿವಗಂಗಾ, ಪಾಲಿಕೆ ಸದಸ್ಯೆ ರೇಣುಕಾ ಶ್ರೀನಿವಾಸ್, ಮುಖಂಡರುಗಳಾದ ಓ. ಮಹೇಶ್ವರಪ್ಪ, ಗಣೇಶ ಹುಲ್ಮನಿ, ಕುಮಾರಣ್ಣ, ಸಂತೋಷ್ ಕುಮಾರ್, ಹೆಚ್.ಬಿ. ದುರುಗೇಶ್, ಅರುಣ, ಬಸವರಾಜ್ ತೋಟದ್, ನಿಟುವಳ್ಳಿ ದೇವಣ್ಣ ಮತ್ತಿತರರು ಭಾಗವಹಿಸಲಿದ್ದಾರೆ.

ವೇದಿಕೆ ಕಾರ್ಯಕ್ರಮದ ನಂತರ ದಿಯಾ ಮೆಲೋಡಿಯಸ್ ಆರ್ಕೆಸ್ಟ್ರಾ ತಂಡದಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ರಾಜಣ್ಣ, ವೈ. ಭಾಗ್ಯದೇವಿ, ಕೆ.ವೈ. ತಿಪ್ಪೇಸ್ವಾಮಿ, ನಾಗರಾಜ್, ಸುರೇಶ್, ಹರೀಶ್ ಮತ್ತಿತರರಿದ್ದರು.

## ನಗರದಲ್ಲಿ ನಾಳೆ ಸ್ಪೈರೋಮೀಟರ್ ತಪಾಸಣೆ

ದಾವಣಗೆರೆ, ಜು. 11- ನಗರದ ಮೋತಿ ವೀರಪ್ಪ ಕಾಲೇಜು ಹಿಂಭಾಗದ ಜೈನ್ ಲ್ಯಾಬ್ ಕೆಳಗಿರುವ ಡಾ. ಎನ್.ಹೆಚ್. ಕೃಷ್ಣ ಅವರ ಕ್ಲಿನಿಕ್‌ನಲ್ಲಿ ವೈದ್ಯರ ದಿನಾಚರಣೆಯ ಪ್ರಯುಕ್ತ ನಾಡಿದ್ದು ದಿನಾಂಕ 13ರ ಶನಿವಾರ ಉಚಿತ ಶ್ವಾಸಕೋಶ ತಪಾಸಣೆ (ಸ್ಪೈರೋಮೀಟರ್) ಹಾಗೂ ಉಚಿತ ವೈದ್ಯರ ಸಲಹೆ ನೀಡಲಾಗುವುದು. ಅಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ರವರೆಗೆ ಈ ತಪಾಸಣೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 77605 62311.


**COMMERCIAL SPACE AVAILABLE FOR RENT**

in the Heart of the City PB Road Near Gandi Circle

**1st Floor (4038 sft)**

**2nd Floor (5662 sft)**

Contact here

**DRHD ASSOCIATION**

P.B. Road Near Gandi Circle, Davangere.

Phone: (08192) – 258834, 94498 28834


## ಓದುಗರ ಪತ್ರ

### ಅಧಿಕಾರಿಗಳೇ ಕುರುಡುತನ ಸಾಕು..!



ಮಾನ್ಯರೇ,

ನಗರದ ಎ.ವಿ.ಕೆ ರಸ್ತೆಯ ಲಿಬರ್ಟಿ ಶೋರೂಂ ಎದುರು ಗುಂಡಿ ಬಿದ್ದ ರಸ್ತೆಯಲ್ಲಿ ನಿತ್ಯವೂ ಅಪಘಾತಗಳು ಸಂಭವಿಸುತ್ತಲೇ ಇವೆ. ಸಂಬಂಧಿಸಿದ ಅಧಿಕಾರಿಗಳಿಗೆ ಸಾಕಷ್ಟು ಸಲ ಮನವಿ ಮಾಡಿದರೂ ನಾಗರಿಕರಿಗೆ ಬೆಲೆ ಇಲ್ಲದಂತಾಗಿದೆ. ಪತ್ರಿಕೆಯಲ್ಲಿ ಸಮಸ್ಯೆ ಬಗ್ಗೆ ಓದುಗರ ಪತ್ರದ ಮೂಲಕ ಅಧಿಕಾರಿಗಳ ಗಮನಕ್ಕೆ ತಂದರೂ ಅಧಿಕಾರಿಗಳು ದಿವ್ಯ ನಿರ್ಲಕ್ಷ್ಯ ತೋರುತ್ತಿದ್ದಾರೆ.

-ಎಚ್.ವಿ. ಸುಮನ್., ವಕೀಲರು.

## ನಗರಕ್ಕೆ ಇಂದು ಸಂಕಲ್ಪ ಯಾತ್ರೆ

ವಿಹಂಗಮ ಯೋಗ ಸಂತ ಸಮಾಜದ ಸ್ಥಾಪನೆ. ಶತಾಬ್ದ ಸಮಾರೋಪ ಮಹೋತ್ಸವ 25,000 ಕುಂಡಗಳನ್ನು ಇರಿಸಿ ಸ್ವರ್ವೇದ ಜ್ಞಾನ ಮಹಾಯಜ್ಞ ನಿಮಿತ್ತ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಆಯೋಜಿಸಲಾಗಿರುವ ರಾಷ್ಟ್ರವ್ಯಾಪಿ ಸಂಕಲ್ಪ ಯಾತ್ರೆಯು ಅನೇಕ ರಾಜ್ಯಗಳಿಂದ ಪ್ರವಾಸಗೊಂಡು ಇಂದು ನಗರವನ್ನು ತಲುಪಲಿದೆ. ದಿವ್ಯ ಸ್ವರ್ವೇದ ಕಥೆಯ ಪ್ರವರ್ತಕ ಸಂತಶ್ರೀ ವಿಜ್ಞಾನ ದೇವಜೀ ಮಹಾರಾಜ ಪಾವನ ಉಪಸ್ಥಿತಿಯಲ್ಲಿ ಸ್ವರ್ವೇದ ಕಥಾಮೃತ ಸಮಾರೋಪ ಹಾಗೂ ಸಾಧನ ಸಮಾವೇಶವು ದಾವಣಗೆರೆ - ಹರಿಹರ ಅರ್ಬನ್ ಸಮುದಾಯ ಭವನದಲ್ಲಿ ಸಂಜೆ 5 ಗಂಟೆಗೆ ನೆರವೇರಲಿದೆ.

## ಭದ್ರಾ ಅಣೆಕಟ್ಟೆಗೆ ಬಿಜೆಪಿ ಯುವ ನಾಯಕ ಅತಿಥ್ ಅಂಬರ್‌ಕರ್ ಭೇಟಿ



ಇತ್ತೀಚಿನ ಕೆಲವು ದಿನಗಳ ಮಳೆಯಿಂದಾಗಿ ಭದ್ರಾ ಅಣೆಕಟ್ಟೆಗೆ ಒಳಹರಿವು ಹೆಚ್ಚಾಗಿದ್ದು, ಈ ಹಿನ್ನೆಲೆಯಲ್ಲಿ ದಾವಣಗೆರೆ ಬಿಜೆಪಿ ತಂಡ ಗುರುವಾರ ಭೇಟಿ ನೀಡಿದ್ದು, ನೀರಿನ ಒಳಹರಿವು ಮತ್ತು ಹೊರ ಹರಿವಿನ ಬಗ್ಗೆ ಗೇಟಿಗೆ ಸಂಬಂಧಿಸಿದ ತಾಂತ್ರಿಕ ವಿಷಯಗಳ ಕುರಿತು ಸಂಬಂಧಪಟ್ಟವರೊಂದಿಗೆ ಚರ್ಚಿಸಿದರು. ರೈತರಿಗೆ ಯಾವುದೇ ತೊಂದರೆಯಾಗದಂತೆ ಕಾಲುವೆ ನಿರ್ವಹಿಸಲು ವಿನಂತಿಸಲಾಯಿತು. ದಾವಣಗೆರೆ ಜಿಲ್ಲಾ ಬಿಜೆಪಿ ಪದಾಧಿಕಾರಿಗಳಾದ ಹೆಚ್.ಎನ್. ಶಿವಕುಮಾರ್, ಮಾಜಿ ಮೇಯರ್ ವಸಂತ್ ಕುಮಾರ್, ಮಾಜಿ ಮೇಯರ್ ಗುರುನಾಥ್, ಆವರಗೆರೆ ಸುರೇಶ್, ದೂಡಾ ಮಾಜಿ ಅಧ್ಯಕ್ಷ ಎ.ವೈ ಪ್ರಕಾಶ್, ಶಿವರಾಜ್ ಪಟೇಲ್, ಸಿದ್ದೇಶ್ ಹನುಮನಹಳ್ಳಿ, ಸಂಕೋಳ್ ಚಂದ್ರಶೇಖರ್, ಜಿಲ್ಲಾ ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷ ಅತಿಥ್ ಅಂಬರ್‌ಕರ್ ಮತ್ತಿತರರು ಭಾಗವಹಿಸಿದ್ದರು.


**ಇಂದಿನಿಂದ ದಾವಣಗೆರೆ ಹಾರ್ಡ್‌ವೇರ್ ಅಂಡ್ ಪ್ಲೈವುಡ್ ನೂತನ ಮಳಿಗೆ ಆರಂಭ**

**ದಾವಣಗೆರೆ ಹಾರ್ಡ್‌ವೇರ್ & ಪ್ಲೈವುಡ್**

(ಹೋಲ್‌ಸೇಲ್ ಮತ್ತು ರಿಟೇಲ್)

ಅಧಿಕೃತ ಮಾರಾಟಗಾರರು :

ಪ್ಲೈವುಡ್, ಡೋರ್ಸ್, ಗ್ಲಾಸ್, ಲ್ಯಾಮಿನೇಟ್ಸ್, ಮೋಲ್ಡಿಂಗ್, ಡೋರ್ ಫಿಟ್ಟಿಂಗ್ ಮತ್ತು ಹಾರ್ಡ್‌ವೇರ್ ಇತ್ಯಾದಿ...

ನಂ. 633/2, ಬಿನ್ನಿ ಕಂಪನಿ ರಸ್ತೆ, ದಾವಣಗೆರೆ-577002.

ಇಲ್ಲಿ ನಮ್ಮ ನೂತನ ಮಳಿಗೆಯನ್ನು ಜುಲೈ 12ರ ಶುಕ್ರವಾರ ಮಧ್ಯಾಹ್ನ 12.30ಕ್ಕೆ ಪೂಜಾ ಕಾರ್ಯಕ್ರಮದೊಂದಿಗೆ ಆರಂಭಿಸುತ್ತಿದ್ದೇವೆ. ತಾವುಗಳು ಬಂದು ಶುಭ ಕೋರಬೇಕಾಗಿ ವಿನಂತಿ.

ಮಾಲೀಕರು :

ಶರ್ವನ್ ಮೊ: 86181 73432

ಶ್ರವಣ್ ಮೊ: 70226 12106

ಸ್ವಾಗತ ಕೋರುವವರು:

ಓಂ ಶ್ರೀ ಮಹಾಲಕ್ಷ್ಮಿ ಪಾನಿಪುರಿ ಸೆಂಟರ್

ಪಿ.ಬಿ. ರಸ್ತೆ, ದಾವಣಗೆರೆ.

# ಅಂಕಗಳ ಜೊತೆಗೆ ಕೌಶಲ್ಯ ಬೆಳೆಸಿಕೊಳ್ಳುವುದು ಅವಶ್ಯ

## ಎಸ್.ಬಿ.ಸಿ. ಕಾಲೇಜಿನ ಕಾರ್ಯಕ್ರಮದಲ್ಲಿ ದಾವಣಗೆರೆ ವಿವಿ ಕುಲಸಚಿವ (ಪರೀಕ್ಷಾಂಗ) ಡಾ.ಸಿ.ಕೆ. ರಮೇಶ್



ದಾವಣಗೆರೆ, ಜು. 11- ವಿದ್ಯಾರ್ಥಿಗಳು ಅಂಕಗಳ ಜೊತೆಗೆ ವಿವಿಧ ಕೌಶಲ್ಯಗಳನ್ನು ಬೆಳೆಸಿಕೊಳ್ಳುವ ಅವಶ್ಯವಿದೆ. ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ವಿಶೇಷ ವ್ಯಕ್ತಿಯಾಗಿ ಹೊರ ಹೊಮ್ಮುವುದು ಮುಖ್ಯ ಎಂದು ದಾವಣಗೆರೆ ವಿವಿ ಕುಲಸಚಿವ (ಪರೀಕ್ಷಾಂಗ) ಡಾ. ಸಿ.ಕೆ. ರಮೇಶ್ ಹೇಳಿದರು.

ನಗರದ ಸುಶೀಲಮ್ಮ ಬಂಕಾಪುರದ ಚನ್ನಬಸಪ್ಪ ಪ್ರಥಮ ದರ್ಜೆ ಮಹಿಳಾ ಕಾಲೇಜು (ಎಸ್.ಬಿ.ಸಿ.) ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ ನಿನ್ನೆ ಹಮ್ಮಿಕೊಂಡಿದ್ದ 2023-24 ನೇ ಸಾಲಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಘದ ವಾರ್ಷಿಕೋತ್ಸವ, ಕ್ರೀಡಾ, ಸಾಂಸ್ಕೃತಿಕ, ಎನ್ನೆಸ್ಸೆಸ್ ಹಾಗೂ ರೆಡ್‌ಕ್ರಾಸ್ ಘಟಕಗಳ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಸಮಾಜಕ್ಕೆ ಏನಾದರೂ ತಮ್ಮಿಂದ ಕೊಡುಗೆ ನೀಡಿದಾಗ ಮಾತ್ರ ಬದುಕಿಗೆ ಸಾರ್ಥಕತೆ ಬರುತ್ತದೆ. ಇಂದಿನ ವಿದ್ಯಾರ್ಥಿಗಳಲ್ಲಿ ಮಾನವೀಯ ಮತ್ತು ಸಾಮಾಜಿಕ ಮೌಲ್ಯಗಳು ಕಣ್ಮರೆಯಾಗುತ್ತಿರುವುದು ವಿಷಾದದ ಸಂಗತಿಯಾಗಿದೆ ಎಂದರು.

ಮೌಲ್ಯ ಇಲ್ಲದ ಶಿಕ್ಷಣ ವ್ಯರ್ಥ. ಪ್ರತಿಯೊಬ್ಬರೂ ಸಹ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಎಸ್‌ಬಿಸಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಅಧ್ಯಕ್ಷ ಬಿ.ಸಿ. ಉಮಾಪತಿ ಮಾತನಾಡಿ, ವಿದ್ಯಾರ್ಥಿಗಳು ಭಾರತೀಯ ಸಂಸ್ಕೃತಿ ಉಳಿಸಿ, ಬೆಳೆಸುವ ಅಗತ್ಯವಿದೆ. ವಿದ್ಯಾರ್ಥಿಗಳಿಗೆ ಸಂಸ್ಕಾರ ಮುಖ್ಯ ಎಂದರು.

ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನ ಟ್ರಸ್ಟಿ ಅಥಣಿ ಪ್ರಶಾಂತ್, ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಭಾಗ್ಯಶ್ರೀ ಡಿ. ಹುಬ್ಬೀಕರ್ ಮತ್ತಿತರೆ ಗಣ್ಯರು ಪಾಲ್ಗೊಂಡಿದ್ದರು.

ಶಾಂಭವಿ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಚಂದನ ಸ್ವಾಗತಿಸಿದರು. ಕಾಲೇಜಿನ ಪ್ರಾಚಾರ್ಯ ಡಾ.ಕೆ.ಷಣ್ಮುಖ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾವ್ಯ ನಿರೂಪಿಸಿದರು. ಗೌರಿ ಚಿನ್ಮಯಿ ವಂದಿಸಿದರು.

## ಸಿಎ ಪರೀಕ್ಷೆಯಲ್ಲಿ ಪ್ರಥಮ ಹಂತದಲ್ಲೇ ಮನೋಜ್ ಉತ್ತೀರ್ಣ



ದಾವಣಗೆರೆ, ಜು. 11 - ಭಾರತೀಯ ಲೆಕ್ಕಪರಿಶೋಧಕರ ಸಂಸ್ಥೆ ನಡೆಸುವ ದೇಶದ ಪ್ರಮುಖ ಪರೀಕ್ಷೆಗಳಲ್ಲೊಂದಾದ 'ಚಾರ್ಟರ್ಡ್ ಅಕೌಂಟೆಂಟ್' (C.A.) ಅಂತಿಮ ಪರೀಕ್ಷೆಯಲ್ಲಿ ನಗರದ ಬಿ.ಎಸ್. ಮನೋಜ್ ಪ್ರಥಮ ಹಂತದಲ್ಲೇ ಉತ್ತಮ ಅಂಕಗಳನ್ನು ಪಡೆದು ಉತ್ತೀರ್ಣರಾಗಿದ್ದಾರೆ.

ಸ್ಥಳೀಯ ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿ.ಕಾಂ. ಪದವಿ ಪೂರೈಸಿದ್ದ ಮನೋಜ್ ಅವರನ್ನು ಕಾಲೇಜಿನ ಅಧ್ಯಕ್ಷ ಬಿ.ಸಿ. ಶಿವಕುಮಾರ್, ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರು, ಪ್ರಾಂಶುಪಾಲ ಪ್ರೊ. ಎಂ.ಸಿ. ಗುರು, ಉಪನ್ಯಾಸಕರು, ಕಚೇರಿ ಸಿಬ್ಬಂದಿಗಳು, ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರು ಅಭಿನಂದಿಸಿದ್ದಾರೆ.

## ಹೊನ್ನಾಳಿ-ನ್ಯಾಮತಿಗೆ ಬಿಇಒ ಆಗಿ ಕೆ.ಟಿ. ನಿಂಗಪ್ಪ




ಹೊನ್ನಾಳಿ, ಜು.11- ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿಗೆ ನೂತನ ಬಿಇಒ ಆಗಿ ಕೆ.ಟಿ.ನಿಂಗಪ್ಪ ಅವರು ಇದೇ ದಿನಾಂಕ 15 ರ ಸೋಮವಾರದಿಂದ ಕರ್ತವ್ಯಕ್ಕೆ ಹಾಜರಾಗಲಿದ್ದಾರೆ. ಈ ಹಿಂದಿನ ಬಿಇಒ ಎಸ್.ಸಿ.ನಂಜರಾಜ್ ವಯೋನಿವೃತ್ತಿ ಹೊಂದಿದ್ದರಿಂದ ಬಿಇಒ ಹುದ್ದೆ ಖಾಲಿಯಾಗಿತ್ತು. ನೂತನ ಬಿಇಒ ನಿಂಗಪ್ಪ ಅವರು ಇಲ್ಲಿಯವರೆಗೂ ಯಲಬುರ್ಗಾ ತಾಲ್ಲೂಕಿನಲ್ಲಿ ಬಿಇಒ ಆಗಿದ್ದರು.











## ದಾವಣಗೆರೆ ಸಿಎ ಅಸೋಸಿಯೇಷನ್ ಅಧ್ಯಕ್ಷರಾಗಿ ಉಮೇಶ್ ಶೆಟ್ಟಿ



ದಾವಣಗೆರೆ, ಜು.11- ದಾವಣಗೆರೆ ಚಾರ್ಟರ್ಡ್ ಅಕೌಂಟೆಂಟ್ಸ್ ಅಸೋಸಿಯೇಷನ್ನಿನ ಅಧ್ಯಕ್ಷರಾಗಿ ಹಿರಿಯ ಲೆಕ್ಕಪರಿಶೋಧಕ ಉಮೇಶ್ ಶೆಟ್ಟಿ, ಕಾರ್ಯದರ್ಶಿಯಾಗಿ ಎಸ್. ಲಿಂಗರಾಜ್ ಆಯ್ಕೆಯಾಗಿದ್ದಾರೆ.

ಖಜಾಂಚಿಯಾಗಿ ಜ್ಯೋತಿ, ಜಂಟಿ ಕಾರ್ಯದರ್ಶಿಯಾಗಿ ಎಸ್. ಓಂಕಾರಪ್ಪ ಆಯ್ಕೆಯಾಗಿದ್ದಾರೆ. ನಗರದ ಪಿ.ಬಿ. ರಸ್ತೆಯಲ್ಲಿರುವ ಚಾರ್ಟರ್ಡ್ ಅಕೌಂಟೆಂಟ್ಸ್ ಭವನದಲ್ಲಿ ಇಂದು ನಡೆದ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ಆಯ್ಕೆ ನಡೆಯಿತು.

## ಪವನ್‌ಗೆ ಬಂಗಾರದ ಪದಕ ಅಂತರರಾಷ್ಟ್ರೀಯ ಸ್ಪರ್ಧೆಗೆ ಆಯ್ಕೆ



ದಾವಣಗೆರೆ, ಜು.11- ಮಧ್ಯಪ್ರದೇಶದ ಉಜ್ಜೈನ್‌ನಲ್ಲಿ ಈಚೆಗೆ ನಡೆದ ರಾಷ್ಟ್ರೀಯ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ನಗರದ ಚಾಣಕ್ಯ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ತೃತೀಯ ಬಿ.ಎ ವಿದ್ಯಾರ್ಥಿ ಪಿ. ಎಚ್. ಪವನ್ ಅವರು ಜಿಲ್ಲೆ ಮತ್ತು ರಾಜ್ಯವನ್ನು ಪ್ರತಿನಿಧಿಸಿ ಬಂಗಾರದ ಪದಕ ಗಳಿಸುವ ಮೂಲಕ ಆಸ್ಟ್ರೇಲಿಯಾದಲ್ಲಿ ನಡೆಯುವ ಅಂತರರಾಷ್ಟ್ರೀಯ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

## ನಗರದಲ್ಲಿ ಇಂದು ಸಿದ್ದೇಶ್ವರರಿಂದ ಸಾರ್ವಜನಿಕರ ಭೇಟಿ

ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಇಂದು ಮಧ್ಯಾಹ್ನ 12ರಿಂದ ಸಂಜೆ 4 ರವರೆಗೆ ಜಿ.ಎಂ.ಐ.ಟಿ. ಅತಿಥಿ ಗೃಹದಲ್ಲಿ ಸಾರ್ವಜನಿಕರನ್ನು ಭೇಟಿ ಮಾಡಲಿದ್ದಾರೆ.


**ಬೇಕಾಗಿದ್ದಾರೆ**

ಕರ್ನಾಟಕದಾದ್ಯಂತ ಬೆಳೆಯುತ್ತಿರುವ ISO CERTIFIED ಕಂಪನಿ ಇದೀಗ ದಾವಣಗೆರೆಯಲ್ಲಿ, ಟೆಲಿಕಾಲಿಂಗ್ ಕೆಲಸಕ್ಕೆ 500 + (ಹುಡುಗ / ಹುಡುಗಿಯರು) ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :

+ 9187925 09454
+ 9187927 68154

















KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas